# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 212 Issue: 212 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 25.02.2025 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರ್ಯಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್


ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


## ಹಂಪಿ ಉತ್ಸವಕ್ಕೆ ದಿನಗಣನೆ: ಫೆ.28 ರಂದು ಉದ್ಘಾಟನೆ ಸಮಾರಂಭ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿ

# ಎಂಪಿ ಪ್ರಕಾಶ ಪ್ರಧಾನ ವೇದಿಕೆಯಲ್ಲಿ ಮೂರು ದಿನ ಸಿನಿಮಾ ಕಲಾವಿದರ ಶೋ








**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಇಲಾಖೆ ಹಾಗೂ ವಿಜಯನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸಲಾಗುತ್ತಿರುವ ಹಂಪಿ ಉತ್ಸವ–2025 ಕ್ಕೆ ದಿನಗಣನೆ ಆರಂಭವಾಗಿದೆ. ಫೆ.28 ಹಾಗೂ ಮಾರ್ಚ್ 1 ಮತ್ತು 2 ತಾರೀಖಿನಂದು ಮೂರು ದಿನಗಳ ಕಾಲ ವಿಜಯನಗರ ಸಾಮ್ರಾಜ್ಯದ ಗತವೈಭವ ಸಾರುವ ನಿಟ್ಟಿನಲ್ಲಿ ಹಂಪಿ ಉತ್ಸವ ಜರುಗಲಿದೆ.

ಫೆ.28 ಶುಕ್ರವಾರ ಸಂಜೆ 6 ಗಂಟೆಗೆ ಗಾಯತ್ರಿ ಪೀಠದ ಬಳಿ ನಿರ್ಮಿಸಲಾಗಿರುವ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಉದ್ಘಾ ಟನಾ ಸಮಾರಂಭ ಜರುಗಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಂಪಿ ಉತ್ಸವ ಉದ್ಘಾಟಿಸುವರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘನ ಉಪಸ್ಥಿತರಿರುವರು. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್.ಕೆ.ಪಾಟೀಲ್, ಸಾರಿಗೆ ಮತ್ತು ಮುಜುರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ ಗೌರವ ಉಪಸ್ಥಿತರಿರುವರು. ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸುವರು. ಗಣ್ಯ ಅತಿಥಿಗಳಾಗಿ ಸಂಸದರಾದ ಈ.ತುಕಾರಾಮ್ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ, ಗೌರವ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಪಾಲ್ಗೊಳ್ಳುವರು.

**ಉತ್ಸವದಲ್ಲಿ ವಿಶೇಷ ಕಾರ್ಯಕ್ರಮಗಳ ಆಕರ್ಷಣೆ:**

ಹಂಪಿ ಉತ್ಸವದ ಅಂಗವಾಗಿ ಫೆ.25 ಮಂಗಳವಾರದಂದು ಬೆಳಿಗ್ಗೆ 8 ಗಂಟೆಗೆ ಮಂಗಳವಾರ ಹೊಸಪೇಟೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ಬೈಕ್ ರ್‍ಯಾಲಿ ನಡೆಯಲಿದೆ. ಫೆ.26 ಬುಧವಾರದಂದು ಸಂಜೆ 6 ಗಂಟೆಗೆ ಹಂಪಿ ವಿರೂಪಾಕ್ಷ ದೇವಸ್ಥಾನದ ಹತ್ತಿರದ ತುಂಗಭದ್ರ ನದಿ ತಟದಲ್ಲಿ ತುಂಗಾರತಿ ನಡೆಯಲಿದೆ. ಫೆ.27 ಗುರವಾರ ಬೆಳಿಗ್ಗೆ 10:30ಕ್ಕೆ ದೋಣಿ ವಿಹಾರಕ್ಕೆ ಚಾಲನೆ ನೀಡಲಾಗುವುದು. ಅಂದು ಮಧ್ಯಾಹ್ನ 3 ಗಂಟೆಗೆ ಹೊಸಪೇಟೆ ನಗರದ ವಡಕರಾಯನ ದೇವಸ್ಥಾನದ ರಥ ಬೀದಿಯಲ್ಲಿ ವಿಜಯನಗರ ವಸಂತ ವೈಭವ ಮೆರಣಿಗೆ ಹಮ್ಮಿಕೊಳ್ಳಾಗಿದೆ. ಈ ಬಾರಿ ಅಂಬಾರಿ ಹೊತ್ತ ಆನೆ ಮೆರವಣಿಗೆಯಲ್ಲಿ ಸಾಗಲಿದೆ. ಫೆ.28 ಶುಕ್ರವಾರದಂದು 10 ಗಂಟೆಗೆ ಹಂಪಿ ಬೈ ಸ್ಕೈ ಚಾಲನೆ ದೊರಕಲಿದೆ.

**ಗಾಯತ್ರಿ ಪೀಠದ ಬಳಿಯ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಫೆ.28 ರಿಂದ ಮಾರ್ಚ್ 1 ಹಾಗೂ 2 ಸೇರಿ ಮೂರು ದಿನಗಳ ಕಾಲ ಸಂಜೆ 6 ಗಂಟೆಯಿಂದ ಜರುಗುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಚಲನಚಿತ್ರ ಕಲಾವಿದರ ದಂಡು ಪಾಲ್ಗೊಳ್ಳಲಿದೆ.**

**ಮೊದಲ ದಿನ ಕಾರ್ಯಕ್ರಮ:** ನಟ ರಮೇಶ್ ಅರವಿಂದ್, ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್ ಕುಮಾರ್, ನಿರ್ದೇಶಕ ತರುಣ್ ಸುಧೀರ್, ನಟಿಯರಾದ ಪ್ರೇಮ, ವೈಷ್ಣವಿ ಗೌಡ, ಬೇಬಿ ಸಿಹಿ, ಸೋನಲ್ ಮೊಂಥೆರೋ ಭಾಗವಹಿಸುವರು. ಗಾಯಕ ರಾಜೇಶ್ ಕೃಷ್ಣನ್ ಅವರ ತಂಡ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಇವರೊಂದಿಗೆ ಬಿಗ್ ಬಾಸ್ 11 ಸಂಚಿಕೆ ವಿಜೇತ ಹನುಮಂತು ಭಾಗವಹಿಸುವರು. ವಿವಿಧ ಕಲಾವಿದರು ಮಿಮಿಕ್ರಿ ಕಾರ್ಯಕ್ರಮ ನಡೆಸಿಕೊಡಲಿದೆ.

**ಎರಡನೇ ದಿನದ ಕಾರ್ಯಕ್ರಮ:** ನಟ ನಟಿಯರಾದ ಉಪೇಂದ್ರ, ಪ್ರಿಯಾಂಕ ಉಪೇಂದ್ರ, ವಸಿಷ್ಠ ಸಿಂಹ, ರ್‍ಯಾಪರ್ ರಚ್ಚು, ಶರಣ್ಯ ಶೆಟ್ಟಿ, ಮೋಕ್ಷ ಕುನಾಲ್, ಅನುಶ್ರೀ, ದಿವ್ಯಾ ಆಲೂರ್, ರಜನಿ ಬೀಟ್ ಗುರು ಭಾಗವಹಿಸುವರು. ಸಂಗೀತ ನಿರ್ದೇಶಕ ಅರ್ಜುನ್ ಜನ್ಯಾ ನೇತೃತ್ವದ ತಂಡ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಸರಿಗಮಪ 21ರ ಸ್ಪರ್ಧಿ ಬಾಳು ಬೆಳಗುಂದಿ ಭಾಗವಹಿಸುವರು. ಕಾಮಿಡಿ ಕಿಲಾಡಿ ತಂಡ ಹ್ಯಾಸ ಸಂಜೆ ಕಾರ್ಯಕ್ರಮ ನಡೆಸಿಕೊಡಿಲಿದೆ.

**ಮೂರನೆಯ ದಿನ ಕಾರ್ಯಕ್ರಮ:** ನಟ ನಟಿಯರಾದ ವಿಜಯ್ ರಾಘವೇಂದ್ರ, ರಮ್ಯಾ, ಅನು ಪ್ರಭಾಕರ್, ದಿಗಂತ್, ಐಂದ್ರಿತಾ ರೈ, ರಾಗಿಣಿ ದ್ವಿವೇದಿ, ಶೃತಿ ಹರಿಹರನ್, ಬಾವನಾ ರಾವ್ ಭಾಗವಹಿಸುವರು. ಸಂಗೀತ ನಿರ್ದೇಶಕ ಹಾಗೂ ಗಾಯಕ ಗುರುಕಿರಣ್ ರಸಮಂಜರಿ ಕಾರ್ಯಕ್ರಮ ಪ್ರಸ್ತುತ ಪಡಿಸುವರು. ಮಾಳೂ ನಪನಾಳ ಗೀತ ಗಾಯನ ನಡೆಸಿಕೊಡುವರು. ಗಿಚ್ಚಿ ಗಿಲಿಗಲಿ ತಂಡ ಹ್ಯಾಸ ಸಂಜೆ ಕಾರ್ಯಕ್ರಮ ನಡೆಸಿಕೊಡಲಿದೆ.

ಫೆ.28 ಶುಕ್ರವಾರದಂದು ಬೆಳಿಗ್ಗೆ 10 ರಿಂದ 10:30 ಗಂಟೆಯ ಒಳಗೆ ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಎತ್ತುಗಳ ಪ್ರದರ್ಶನ, ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಮುಂಭಾಗದಲ್ಲಿ ರಂಗೋಲಿ ಸ್ಪರ್ಧೆ, ಮಾತಂಗ ಪರ್ವತ ಮೈದಾನದಲ್ಲಿ ಫಲ ಪುಷ್ಪ ಪ್ರದರ್ಶನ, ಸಾವಯವ ಮತ್ತು ಸಿರಿಧಾನ್ಯಗಳ ವಸ್ತು ಪ್ರದರ್ಶನ, ಸಿರಿಧಾನ್ಯಗಳ ಪಾಕ ಸ್ಪರ್ಧೆ, ಆಹಾರ ಮೇಳ, ವಿಜ್ಞಾನಿಗಳಿಂದ ಉಪನ್ಯಾಸ ಹಾಗೂ ಸಂವಾದ, ಪುಸ್ತಕ ಪ್ರದರ್ಶನ, ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ, ಚಿತ್ರ ಸಂತೆ, ಮತ್ಸ್ಯ ಮೇಳಕ್ಕೆ ಚಾಲನೆ ನೀಡಲಾಗುವುದು. ಸಂಜೆ 6 ಗಂಟೆಗೆ ಹಂಪಿಯ ಆನೆ ಮತ್ತು ಕುದರೆ ಲಾಯ ಆವರಣದಲ್ಲಿ ವಿಜಯನಗರ ವೈಭವ ಸಾರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಉದ್ಘಾಟನೆಯಾಗಲಿದೆ.

ಮಾರ್ಚ್ 1 ಶುಕ್ರವಾರದಂದು ಬೆಳಗ್ಗೆ 7 ಗಂಟೆಗೆ ಹಂಪಿಯ ವಿಜಯ ವಿಠಲ ದೇವಾಲಯ ಆವರಣದಲ್ಲಿ ಯೋಗಾಸನ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಹೊಸ ಮಲಪನಗುಡಿಯ ವಿದ್ಯಾರಣ್ಯ ಪೀಠ ಹೈಸ್ಕೂಲ್ ಮೈದಾನದಲ್ಲಿ ಕುಸ್ತಿ ಸೇರಿದಂತೆ ಗ್ರಾಮೀಣ ಕ್ರೀಡೆಗಳಿಗೆ ಚಾಲನೆ ನೀಡಲಾವುದು. ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಕುರಿಗಳ ಪ್ರದರ್ಶನ ಜರುಗಲಿದೆ.

ಮಾರ್ಚ್ 2 ಭಾನುವಾರದಂದು ಕಮಲಾಪುರ ಹವಾಮಾ ಕಚೇರಿ ಮೈದಾನದಲ್ಲಿ ಶ್ವಾನ ಪ್ರದರ್ಶನ ಜರುಗಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ಉದ್ಧಾನ ವೀರಭದ್ರೇಶ್ವರ ದೇವಸ್ಥಾನದ ಬಳಿ ಜಾನಪದ ವಾಹಿನಿ ಮೆರವಣಿಗೆ ಚಾಲನೆ ನೀಡಲಾಗುವುದು.

**6 ವೇದಿಕೆಯಲ್ಲಿ ಮೈದಳೆಯಲಿದೆ ಹಂಪಿ ಮೆರಗು**

2025ರ ಹಂಪಿ ಉತ್ಸವದ ಅಂಗವಾಗಿ ಗಾಯತ್ರಿ ಪೀಠದ ಬಳಿಯ ಮುಖ್ಯ ವೇದಿಕೆಗೆ ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ್ ಹೆಸರು ಇಡಲಾಗಿದೆ. ಇದರೊಂದಿಗೆ ಪ್ರತಿ ಬಾರಿಯಂತೆ ಎದುರು ಬಸವಣ್ಣ, ವಿರೂಪಾಕ್ಷೇಶ್ವರ ದೇವಸ್ಥಾನ, ಸಾಸುವೆ ಕಾಳು ಗಣಪ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಹಂಪಿಯ ಆನೆ ಮತ್ತು ಕುದರೆ ಲಾಯ ಆವರಣದಲ್ಲಿ ವಿಜಯನಗರ ವೈಭವ ಸಾರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಬಾರಿ ಹೊಸದಾಗಿ ಮಹಾನವಮಿ ದಿಬ್ಬದ ಬಳಿ 6ನೇ ವೇದಿಕೆ ನಿರ್ಮಾಣ ಮಾಡಲಾಗಿದ್ದು, ಇತರೆ ಹಾಗೂ ಸ್ಥಳೀಯ ಕಲಾವಿದರಿಗೆ ಹೆಚ್ಚು ಅವಕಾಶ ಲಭಿಸಿದ್ದು, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

## ಸರ್ಕಾರಿ ಆದರ್ಶ ವಿದ್ಯಾಲಯ 6ನೇ ತರಗತಿಗೆ ಪ್ರವೇಶ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯ ಜಂಬುನಾಥಹಳ್ಳಿ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ 2025–26 ನೇ ಸಾಲಿನ ಆರನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಪ್ರವೇಶ ಪರೀಕ್ಷೆಗೆ ಆನ್ಲೈನ್ ಅರ್ಜಿ ಕರೆಯಲಾಗಿದ್ದು, ಅರ್ಜಿ ಸಲ್ಲಿಕೆಗೆ ಫೆ.28 ಕೊನೆದಿನವಾಗಿದೆ ಎಂದು ಶಾಲಾ ಮುಖ್ಯಗುರು ಆರ್.ಸುಲೋಚನಾ ಬಾಯಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಹೊಸಪೇಟೆ ತಾಲ್ಲೂಕಿನ ಮಾನ್ಯತೆ ಪಡೆದ ಶಾಲೆಗಳಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರಬೇಕು ಅಥವಾ ಬೇರ ತಾಲೂಕಿನಲ್ಲಿ ವ್ಯಾಸಂಗ ಮಾಡುತಿದ್ದರೆ, ತಹಶೀಲ್ದಾರರಿಂದ ಹೊಸಪೇಟೆ ತಾಲೂಕಿನ ವಾಸಸ್ಥಳ ಪ್ರಮಾಣ ಪತ್ರ ಹೊಂದಿರಬೇಕು. ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಗಳು ತಾವು ಓದುತ್ತಿರುವ ಶಾಲೆಯಿಂದ SATS ಸಂಖ್ಯೆ, ಜಾತಿ & ಆದಾಯ ಪ್ರಮಾಣ ಪತ್ರ ಹೊಂದಿರಬೇಕು. ಆನ್ಲೈನ್ ಅರ್ಜಿ ಸಲ್ಲಿಸುವಾಗ ಪೋಷಕರ ವಾಟ್ಸಪ್ ಮೊಬೈಲ್ ಸಂಖ್ಯೆ ನೀಡಬೇಕು. ವಿಕಲಚೇತನರಾಗಿದ್ದರೆ ಸಕ್ಷಮಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಸಲ್ಲಿಸಬೇಕು. www.schooleducation karnataka.gov.in ಅಥವಾ www.vidyavahini.karnataka.gov.in.ನಲ್ಲಿ ಅರ್ಜಿ ಸಲ್ಲಿಸ ಬಹುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯಗುರುಗಳನ್ನು (8951645809/6363671429) ಸಂಪರ್ಕಿಸ ಬಹುದು ಎಂದು ತಿಳಿಸಿದ್ದಾರೆ.

## ಅಂಬ್ಯುಲೆನ್ಸ್ ದುರುಪಯೋಗ ಆರೋಗ್ಯಾಧಿಕಾರಿಗಳಿಗೆ ನೋಟಿಸ್

### ಎಸ್ಪಿ ಶ್ರೀಹರಿಬಾಬು ಪತ್ತೆ, ದಂಡ ವಸೂಲಿಗೆ ಡಿಸಿ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಫೆ.14 ರಂದು ಮೈಲಾರ ಜಾತ್ರೆ ಕಾರ್ಣಿಕೋತ್ಸವದಲ್ಲಿ ಆರೋಗ್ಯ ಇಲಾಖೆಯ ಅಂಬ್ಯುಲೆನ್ಸ್ ವಾಹನ ದುರುಪಯೋಗವಾದ ಪ್ರಸಂಗ ಬೆಳಕಿಗೆ ಬಂದಿದೆ. ಲಕ್ಷಾಂತರ ಜನ ಸೇರುವ ಜಾತ್ರೆಯಲ್ಲಿ ಆರೋಗ್ಯ ಇಲಾಖೆಯ ಅಂಬ್ಯುಲೆನ್ಸ್‌ನಲ್ಲಿ ಸಂಬಂಧಿಕರನ್ನು ಕೂರಿಸಿಕೊಂಡು ಸೈರನ್‌ನೊಂದಿಗೆ ಜಾತ್ರೆ ಗದ್ದಲದಲ್ಲಿ ಸಂಚರಿಸಿದೆ.

ಸೈರನ್ ಸದ್ದಿನೊಂದಿಗೆ ಅಂಬ್ಯುಲೆನ್ಸ್ ಬುರುವುದನ್ನು ನೋಡಿದ ಪೊಲೀಸರು ಜನರನ್ನು ಚದುರಿಸಿ ಜಾಗ ಮಾಡಿಕೊಟ್ಟಿದ್ದಾರೆ. ಪದೇ ಪದೇ ಅಂಬ್ಯುಲೆನ್ಸ್ ಸೈರನ್‌ನೊಂದಿಗೆ ಓಡಾಟ ಮಾಡುತ್ತಿರುವುದನ್ನು ಗಮನಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಅನುಮಾನಿಸಿ ಅಂಬ್ಯುಲೆನ್ಸ್ ತಡೆದು ತಪಾಸಣೆ ನಡೆಸಿದಾಗ ಆರೋಗ್ಯ ಇಲಾಖೆ ಅಧಿಕಾರಿ ಸಿಬ್ಬಂದಿಗಳ ಸಂಬಂಧಿಕರನ್ನು ಕರೆದುಕೊಂಡು ಹೊಗುತ್ತಿದ್ದುದು ಪತ್ತೆಯಾಗಿದೆ.

ಮೋಟಾರು ಕಾಯ್ದೆ ಅನುಸಾರ ಇದು ಶಿಕ್ಷಾರ್ಹ ಅಪರಾಧವಾಗಿದೆ. ಈ ಘಟನೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್ ಸೋಮವಾರ ಜಿಲ್ಲಾಧಿಕಾರಗಳೊಂದಿಗೆ ಸಭೆಯಲ್ಲಿ ಗಮನಕ್ಕೆ ತಂದರು.

ಕೂಡಲೇ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಸಂಬಂಧ ಪಟ್ಟ ಆರೋಗ್ಯ ಇಲಾಖೆ ಅಧಿಕಾರಿಗೆ ಕೂಡಲೇ ನೋಟಿಸ್ ನೀಡಿ, ದಂಡ ವಸೂಲಿ ಮಾಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ನಿರ್ದೇಶನ ನೀಡಿದರು.

## ಪಿಯುಸಿ ಪರೀಕ್ಷೆ, ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ ಮಾ.1 ರಿಂದ 20 ರವರಗೆ ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಪರೀಕ್ಷೆ ಸುಗಮವಾಗಿ ನಡೆಸಲು ಕೇಂದ್ರದ ಸುತ್ತಮುತ್ತ 144 ಸೆಕ್ಷನ್ ಅನ್ವಯ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲಿರುವ ಜೆರಾಕ್ಸ್ ಅಂಗಡಿ ಹಾಗೂ ಸೈಬರ್ ಅಂಗಡಿಗಳನ್ನು ಮುಚ್ಚುಲು ಆದೇಶಿಸಿ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ಮಾತ್ರ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಉಳಿದ ಎಲ್ಲಾ ಪರೀಕ್ಷಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ಮೊಬೈಲ್ ತರುವುದು ನಿಷೇಧಿಸಿದೆ. ಸದರಿ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವಿಲ್ಲ ಎಂದು ಜಿಲ್ಲಾ ದಂಡಾಧಿಕಾರಿ ಎಂ. ಎಸ್. ದಿವಾಕರ್ ತಿಳಿಸಿದ್ದಾರೆ.


SSLC ಹಂಪಿ ಟೈಮ್ಸ್ ಮಾರ್ಗದರ್ಶಿ
ಈ ಭಾರಿ ಫಲಿತಾಂಶ ನಮ್ಮದೆ
ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಮಾರ್ಗದರ್ಶಿ
ಹೈಸ್ಕೋರ್ ಗಳಿಸಲು ನಿತ್ಯ ಬರೆದು–ಓದಿ


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


Call Us for Advertisements
Good Opportunity for Branding
ಹಂಪಿ ಉತ್ಸವಕ್ಕೆ
ಆಗಮಿಸುವವರಿಗೆ, ವೈಯುಕ್ತಿಕವಾಗಿ, ವ್ಯಾಪಾರಸ್ಥರು, ಉದ್ದಿಮೆದಾರರು ಹಾಗೂ ಸಂಘ–ಸಂಸ್ಥೆಗಳಿಂದ ಸ್ವಾಗತ ಕೋರಲಿಚ್ಚಿಸುವವರು ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಆನಂದ ಬಾಣ





Hampi Utsava Special Advertising Opportunity
Hampi Utsava attracts lakhs of visitors, making it the perfect time to showcase your brand. Book your ad now and take advantage of our Limited-Time Hampi Utsav Discount!
Call us for more info.
94486 33038


**ಮೈಕ್ರೋ ನ್ಯೂಸ್**

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರ್ ಗೌಡ ಜಿ ರಾಮತ್ನಾಳ್ ಅವರು ಫೆಬ್ರವರಿ 25 ರಂದು ಕೊಪ್ಪಳದಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಅಂದು ಬೆಳಿಗ್ಗೆ 9 ಗಂಟೆಗೆ ಹಿರೇಅರಳಿಹಳ್ಳಿಯಿಂದ ಹೊರಟು ಬೆಳಿಗ್ಗೆ 10 ಗಂಟೆಗೆ ಕೊಪ್ಪಳಕ್ಕೆ ಆಗಮಿಸಿ,"ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ" ಶೀರ್ಷಿಕೆಯಡಿ ಆರ್.ಟಿ.ಇ ಕಾಯ್ದೆ–2009ರ ಅನುಷ್ಠಾನದ ಕುರಿತು ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಮಧ್ಯಾಹ್ನ 2 ಗಂಟೆಗೆ ಕೊಪ್ಪಳ ತಾಲ್ಲೂಕು ಮಟ್ಟದ ವಿವಿಧ ಸಮಿತಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ನಂತರ ಅಂದು ಸಂಜೆ 5 ಗಂಟೆಗೆ ಹಿರೇಅರಳಿಹಳ್ಳಿಗೆ ಪ್ರಯಾಣ ಬೆಳಸುವರು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್ HAMPI TIMES

## ಸ್ಟುಡೆಂಟ್ ಕಾಲಂ

### ಬಾಲ್ಯ ವಿವಾಹ ಹೆಣ್ಣು ಮಕ್ಕಳಿಗೆ ಮಾರಕ

ಬಸಾಪುರ ಎಂಬ ಒಂದು ಹಳ್ಳಿ ಆ ಹಳ್ಳಿಯಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಇತ್ತು. ಆ ಶಾಲೆಯಲ್ಲಿ ನೇತ್ರ ಮತ್ತು ಅನುಷಾ ಎಂಬ ಆತ್ಮೀಯ ಗೆಳತಿಯರಿದ್ದರು. ಅವರು ತುಂಬಾ ಚೆನ್ನಾಗಿ ಓದುತ್ತಿದ್ದರು. ಇಬ್ಬರು ಆ ಶಾಲೆಯ ವಿದ್ಯಾಭ್ಯಾಸ ವನ್ನು ಮುಗಿಸಿದರು. ಹೈಸ್ಕೂಲ್ಗೆ ಸೇರಿದರು. ಅಲ್ಲಿಯೂ ಕೂಡ ತುಂಬಾ ಚೆನ್ನಾಗಿ ಓದುತ್ತಿದ್ದರು. ಎಸ್ ಎಲ್ ಸಿ ಪರೀಕ್ಷೆಯನ್ನು ಬರೆದರು ಅದರಲ್ಲಿ ನೇತ್ರ ಕ್ಲಾಸಿಗೆ ಮೊದಲ ಸ್ಥಾನ ಪಡೆದಳು. ಅನುಷಾ ಎರಡನೆ ದರ್ಜೆಯಲ್ಲಿ ಪಾಸಾದರು. ನೇತ್ರನ ಮನೆಯಲ್ಲಿ ಮದುವೆ ಮಾಡಲು ಸಿದ್ದರಾಗಿ ಅವಳಿಗೆ ಹೇಳಿದರು. ಅದಕ್ಕೆ ಅಮ್ಮ ನಾನು ತುಂಬಾ ಓದಿ ಸರ್ಕಾರಿ ನೌಕರಿ ಪಡೆಯಬೇಕೆಂಬ ಆಸೆ ಹೊಂದಿದ್ದೇನೆ ಅಂದಳು, ಆದರೆ ಅವಳ ಅಮ್ಮ ಅಪ್ಪ ಅದಕ್ಕೆ ಒಪ್ಪದೇ, ನೀನು ಮದುವೆ ಯಾಗಲ್ಲ ಎಂದರೆ ನಾವು ಇಬ್ಬರು ವಿಷ ಕುಡಿದು ಸಾಯುತ್ತೇವೆ ಎಂದರು. ಅದಕ್ಕೇ ನೇತ್ರ ಅನಿವಾರ್ಯವಾಗಿ ಅಪ್ಪ–ಅಮ್ಮ ನನ್ನಿಂದ ನೀವು ಸಾಯುವುದು ಬೇಡ ನಾನು ಮದುವೆ ಯಾಗುತ್ತೇನೆ. ಎಂದಳು.



ನೇತ್ರಳನ್ನು ಮದುವೆ ಆಗುವ ಗಂಡು ಕುಡಿಯುತ್ತಿದ್ದನು. ಅವನ ನಡೆತೆಯ ಕೂಡ ಚೆನ್ನಾಗಿರಲಿಲ್ಲ ಆದರೂ ಅವರ ಅಪ್ಪ ಅಮ್ಮ ಅವಳಿಗೆ ಮದುವೆ ಮಾಡಲು ಒಪ್ಪಿದ್ದರು. ಅವಳ ಮದುವೆಯನ್ನು ಎಲ್ಲರೂ ಸೇರಿ ಸೇರಿಕೊಂಡು ಮಾಡಿದರು. ಅವಳು ಗಂಡನ ಮನೆಗೆ ಹೋದಳು. ಅಲ್ಲಿ ಒಂದು ತಿಂಗಳುಗಳ ಕಾಲ ಅವಳನ್ನು ಅವಳ ಗಂಡ ಚೆನ್ನಾಗಿ ನೋಡಿ ಕೊಂಡನು. ನಂತರ ದಿನಗಳಲ್ಲಿ ದಿನ ಮನೆಗೆ ಕುಡಿದು ಬರುತ್ತಿದ್ದ ಮತ್ತು ಅವಳನ್ನು ಒಡೆಯುತ್ತಿದ್ದ ಸಾಲ ಮಾಡಿ ಕುಡಿಯುತ್ತಿದ್ದ, ಅನೇಕ ರೀತಿಯ ತೊಂದರೆಗಳನ್ನು ಕೊಡುತ್ತಿದ್ದನು. ಇದರಿಂದಾಗಿ ಬೇಸತ್ತು ನೇತ್ರ ತವರ ಮನೆಗೆ ವಾಪಾಸ್ಸಾದಳು. ಅವಳ ಅಪ್ಪ ಅಮ್ಮನಿಗೆ ಎಲ್ಲಾ ವಿಷಯ ಹೇಳಿದಳು. ಅವಳ ಅಪ್ಪ ನನ್ನನ್ನು ಕ್ಷಮಿಸಿ ಬಿಡಮ್ಮ ನಾನು ಮದುವೆ ಮಾಡಬಾರದಾಗಿತ್ತು ಎಂದು ಕಣ್ಣೀರು ಹಾಕಿದ. ನೇತ್ರ ಅಳುತ್ತಾ ಅಪ್ಪ ನೀವು ಹೆದರಿಸಿದಕ್ಕೆ ಅಲ್ಲವಾ ನಾನು ಮದುವೆಯಾಗಿದ್ದು. ಈಗ ನಾನು ಏನುಮಾಡಬೇಕಪ್ಪ ಎಂದು ಪ್ರಶ್ನಿಸಿದಳು. ಅದಕ್ಕೆ ಅವರ ತಂದೆ ನೀನೇ ಸ್ವಲ್ಪ ಸುಧಾರಿಸಿಕೊಂಡು ಜೀವನ ಮಾಡಮ್ಮ ಅಂತ ಹೇಳಿದರು. ಅವಳು ಅಳುತ್ತಾ ಗಂಡನ ಮನೆಗೆ ಹೋದಳು. ಅಲ್ಲಿ ಹೋಗಿ ಒಂದು ತೀರ್ಮಾನ ತೆಗೆದುಕೊಂಡಳು. ನಾನು ಸುಮ್ಮನಿದ್ದರೆ ನನ್ನ ಗಂಡ ನನ್ನನ್ನು ಸಾಯಿಸಿ ಬಿಡುತ್ತಾನೆ. ಹೋಗಿ ಪೊಲೀಸ್ ಕಂಪ್ಲೇಂಟ್ ಕೊಡಬೇಕು ಅಂತ ಅಂದುಕೊಂಡಳು. ಅವಳು ಪೊಲೀಸ್ ಕಂಪ್ಲೇಂಟ್ ಕೊಡಲು ಹೋದಳು ಅಲ್ಲಿ ನೇತ್ರಳಿಗೆ ಆಶ್ಚರ್ಯ ಒಂದು ಕಾದಿತ್ತು. ಪೊಲೀಸ್ ಅಧಿಕಾರಿಯಾಗಿ ದ್ದವರು ಅವಳ ಗೆಳತಿ ಅನುಷಾ, ಅಲ್ಲಿ ಅನುಷನನ್ನು ನೋಡಿ ಓಡಿ ಹೋಗಿ ಅವಳನ್ನು ತಬ್ಬಿಕೊಂಡಳು. ಅನುಷಾ ಏನಾಯಿತು ಏಕೆ ನೀನು ಅಳುತ್ತಿದ್ದೀಯಾ? ಎಂದಳು. ನೇತ್ರ ಎಲ್ಲಾ ವಿಷಯವನ್ನು ಹೇಳಿದಳು. ಆವಾಗ ನೀನು ನನಗೆ ಯಾಕೆ ಹೇಳಲಿಲ್ಲ. ಬದಲಾಗಿ ನೀನು 1098ಕ್ಕೆ ಕರೆ ಮಾಡಬೇಕಿತ್ತು. ಆವಾಗ ನೇತ್ರ ಅಳುತ್ತಾ ಹೇಳಿದಳು. ನಾನು ಓದಿದರೆ ನಿನ್ನ ಹಾಗೆ ಕೆಲಸದಲ್ಲಿ ಇರುತ್ತಿದ್ದೆ. ನಮ್ಮ ಅಪ್ಪ ಅಮ್ಮನ ಮಾತನ್ನು ಕೇಳಿ ಮದುವೆಯಾಗಿದ್ದಕ್ಕೆ ನನ್ನ ಬಾಳು ಸರ್ವನಾಶವಾಯಿತು. ಮಿಂಚಿ ಹೋದ ಕಾಲಕ್ಕೆ ಚಿಂತಿಸಿದರೆ ಏನು ಪ್ರಯೋಜನ ಎಂದು ನೇತ್ರ ಅವಳನ್ನು ಕರೆದುಕೊಂಡು ಅವಳ ಗಂಡನ ಮನೆಗೆ ಹೋದಳು. ಅನುಷಾ ಆವಾಗ ಅವಳ ಗಂಡನಿಗೆ ಕುಡಿಯುವುದನ್ನು ತಕ್ಷಣದಿಂದಲೇ ನಿಲ್ಲಿಸಬೇಕು ನೇತ್ರಳಿಗೆ ಯಾವುದೇ ರೀತಿ ತೊಂದರೆ ಹೊಡೆಯುವುದು ಬಡಿಯುದನ್ನು ಮಾಡಿದರೆ ನಿನ್ನನ್ನು ನಾನು ಜೈಲಿಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೆದರಿಸಿದಳು. ಅವನು ಆಯ್ತು ಮೇಡಂ ಇನ್ನೊಮ್ಮೆ ಹೀಗೆ ಮಾಡುವುದಿಲ್ಲ ಇನ್ನು ಮುಂದೆ ನಾನು ನೇತ್ರಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದನು. ಅನುಷಾ ನೇತ್ರಳಿಗೆ ನಿನ್ನ ಗಂಡ ನಿನಗೆ ಮತ್ತೆ ಕಷ್ಟ ಕೊಟ್ಟರೆ ನನಗೆ ಹೇಳು ಎಂದಳು. ನೇತ್ರ ಅನುಷನಿಗೆ ಧನ್ಯವಾದ ಗಳನ್ನು ತಿಳಿಸಿದಳು. ಅದಕ್ಕೆ ಅನುಷಾ ಇದು ನನ್ನ ಕರ್ತವ್ಯ ಎಂದು ಹೇಳಿದಳು. ನೇತ್ರಾಳ ತಂದೆ ತಾಯಿಗೆ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡುವುದರಿಂದ ಆಗುವ ಸಮಸ್ಯೆಗಳ ಬಗ್ಗೆ ಅನುಷಾ ವಿವರಿಸಿದಳು ನಿಮಗೆ ಗೊತ್ತಿರಲಿ. ಬಾಲ್ಯ ವಿವಾಹ ಮಾಡಿದ ತಂದೆ ತಾಯಿ, ಅತ್ತೆ ಮಾವಂದಿರು, ಪುರೋಹಿತರು ಎಲ್ಲರಿಗೂ ಶಿಕ್ಷೆಯಾಗುತ್ತದೆ. ಬಾಲ್ಯ ವಿವಾಹದಿಂದ ಹೆಣ್ಣು ಮಕ್ಕಳ ದೈಹಿಕ, ಮಾನಸಿಕ, ಶಿಕ್ಷಣ ಎಲ್ಲವೂ ಹಾಳಾಗುತ್ತದೆ.

ಎಲ್ಲರೂ ಬಾಲ್ಯ ವಿವಾಹವನ್ನು ಖಂಡಿಸಿರಿ ನಿಮ್ಮ ಮಕ್ಕಳಿಗೆ ಓದುವ ಅವಕಾಶವನ್ನು ಕೊಡಿ ಮುಂದೆ ಒಂದು ದಿನ ಅವರು ನಿಮ್ಮ ಕಷ್ಟಗಳನ್ನು ಕೇಳುವಂತರಾಗುತ್ತಾರೆ ಎಂದು ಹೇಳಿ ಹೊರಟು ಹೋದರು. ನೇತ್ರಾಳ ತಂದೆ ತಾಯಿಗಳು ಮಗಳಿಗಾದ ಅನ್ಯಾಯವ ಕಂಡು ಪಶ್ಚಿತಾಪ ಪಟ್ಟರು

– ಐ. ಚೈತ್ರ 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗೆದೇರಿ, ಹ.ಬೊ.ಹಳ್ಳಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಮೊನ್ನೆ ಒಬ್ಬರು "ಸರ್ ನನ್ನ ಹುಟ್ಟು ಹಬ್ಬ. ನೀವು ಏನು ಉಣ್ಣುತ್ತೀರಿ ಹೇಳಿ. ನಿಮ್ಮ ಮನೆಗೆ ಸ್ವಿಗ್ಗಿ ಮೂಲಕ ಕಳಿಸುತ್ತೇನೆ. ನೀವು ಮನೆಯಲ್ಲಿ ಅಡುಗೆ ಮಾಡುವುದು ಬೇಡ" ಅಂತ ಹೇಳಿದರು. ನಾವೀಗ ಎಷ್ಟು ಮುಂದುವರಿದ್ದಿದ್ದೇವೆ ಅಂದರೆ ಎಲ್ಲರೂ ಕೂಡಿ ಉಣ್ಣುವುದನ್ನೇ ಮರೆತು ಬಿಟ್ಟಿದ್ದೇವೆ. ಮುಂದೊಂದು ದಿನ ನಮ್ಮ ಮನೆಯಲ್ಲಿ ಜಾಗ ಪಡೆದಿರುವ ಅಡುಗೆ ಮನೆಯೇ ಇಲ್ಲವಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಒಲೆ ಹತ್ತಿಸದೆ, ಅನ್ನ ಬೇಯಿಸದೆ ಉಂಡವರಿಗೆ ಸದ್ಯಕ್ಕೆ ಆರೋಗ್ಯ ಭಾಧಿಸಲ್ಲ. ಆದರೆ ಭವಿಷ್ಯದಲ್ಲಿ ಆರೋಗ್ಯಕ್ಕಾಗಿ ದುಡಿದ ಹಣವನ್ನೆಲ್ಲ ಖರ್ಚು ಮಾಡಿದರೂ ಆರೋಗ್ಯ ನಮ್ಮದಾಗದು....

# ಅಡುಗೆಮನೆ ಮೌನವಾದರೆ ಆಯುಷ್ಯ ಕ್ಷೀಣ

ಲೋಕದಲ್ಲಿ ಜೀವನ ಕಟ್ಟಿಕೊಂಡಿರುವ ಮನುಷ್ಯ ಆಹಾರಕ್ಕಾಗಿ ಒಂದಲ್ಲ ಒಂದು ದುಡಿಮೆಯನ್ನು ಮಾಡುತ್ತಾನೆ. ಹೊಟ್ಟೆಯ ಹಸಿವು ಅಂಬೋದು ಅವನಿಗೆ ಇಲ್ಲವಾಗಿದ್ದರೆ ಸೋಮಾರಿಯಾಗಿ ಏನನ್ನು ರೂಪಿಸುತ್ತಿರಲಿಲ್ಲ. ಹಸಿವಿಗಾಗಿ ದೇಹವನ್ನು ಸವೆಸಿದ ಘಟನೆಗಳನ್ನೇ ಇಂದು ಚರಿತ್ರೆ ಅಂತ ಕರೆಯುತ್ತಿದ್ದೇವೆ. ಇಲ್ಲಿ ನೋವು, ನಲಿವು, ಸಂಕಟ, ಹಿಂಸೆ, ಭಯ ಸಂತೋಷ, ಬಡತನ ಹಾಗೂ ಶ್ರೀಮಂತಿಕೆಗಳು ತನ್ನ ಅಸ್ಮಿತೆಯನ್ನು ಪಡೆದುಕೊಂಡಿವೆ. ಈ ರೀತಿ ಮನುಷ್ಯನ ನಡೆಗೆ ಮುಖ್ಯ ಕಾರಣವೇ ಆಹಾರದ ಹುಡುಕಾಟ, ಸಂಗ್ರಹ, ಉಪಭೋಗ ವಾಗಿದೆ. ಅಲೆಮಾರಿಯಾಗಿ ಬೇಟೆಯನ್ನೇ ಬದುಕಾಗಿಸಿಕೊಂಡಿದ್ದಾಗ ಪ್ರಾಣಿಗಳ ಮಾಂಸ, ಗೆಡ್ಡೆ–ಗೆಣಸು, ಹಣ್ಣು–ಕಾಯಿ, ಸೊಪ್ಪು–ಸದೆಗಳ ನ್ನೆಲ್ಲ ಅವನು ನಿಂತ ನೆಲವೇ ಕರುಣಿಸುತ್ತಿತ್ತು. ಪ್ರಯತ್ನ ಮಾತ್ರ ಅವನದಿತ್ತು. ಕಾಲ ನಡೆದಂತೆಲ್ಲ ಮನುಷ್ಯನ ಜೀವನ ಮೀಮಾಸೆಯು ಒಂದು ಕಡೆ ನಿಂತು ಗುಡಿಸಲನ್ನು ಕಟ್ಟಿಕೊಂಡು ಆಹಾರವನ್ನು ಉತ್ತಿ–ಬಿತ್ತಿ; ಬೆಳೆದುಕೊಂಡು ಅದನ್ನೇ ಸಂಗ್ರಹಿಸಿ ಉಣ್ಣುವ ಮೂಲಕ ಹಸಿವನ್ನು ನೀಗಿಸಿಕೊಳ್ಳುವ ಕಡೆಗೆ ನಡೆಯಿತು. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ' ಅನ್ನುವ ದಾಸರ ಮಾತು ಸಹ ಬದುಕಿನ ತಾತ್ವಿಕತೆಯಾಗಿದೆ. ಇಲ್ಲಿ ನೆಲದ ಜೊತೆಗಿನ ದುಡಿಮೆಯು ಅವನಲ್ಲಿ ಬಿಗುವಾಗಿ ನಿಂತಿತು ಮತ್ತು ಆ ಪರಿಸರದಲ್ಲಿ ದಕ್ಕುವ ಉತ್ಪನ್ನಗಳು ಅವನ ಆಹಾರವಾಗಿ ರೂಪುಗೊಂಡಿತು. ಅಕ್ಕಿ, ರಾಗಿ, ಜೋಳ ಇತ್ಯಾದಿ ಧಾನ್ಯ ಹಾಗೂ ಸೊಪ್ಪು, ಕಾಯಿ, ಬೇರು–ನಾರು, ಮೀನು–ಮಾಂಸ ಎಂಬುದೆಲ್ಲವನ್ನು ದೇಹದ ಬಲಕ್ಕಾಗಿ ಬಳಸುತ್ತಿದ್ದಂತೆ ನಮ್ಮ ಎಲ್ಲರ ಮನೆಯಲ್ಲಿಯೂ ಅಡುಗೆ ಮನೆ ಎನ್ನುವುದು ಹುಟ್ಟಿಕೊಂಡಿತು. ಇದರ ಜೊತೆಯಲ್ಲಿಯೇ ಹೆಣ್ಣಿಗೆ ಅಡುಗೆ ಮನೆಯ ಕಾಯಕ ಅಂಟಿಕೊಂಡಿತು.

ಒಲೆಯಿಂದ ಹಿಡಿದು ಮಡಿಕೆ–ಕುಡಿಕೆ, ಪಾತ್ರ–ಪಗಡೆ; ಚೆಂಬು–ಲೋಟೆ; ಕಡೇಕಲ್ಲು–ಅರೇಕಲ್ಲು; ಒರಳು–ಒನಕೆ; ಮರಿಗೆ–ಮಣೆ, ಸಿಕ್ಕ, ಹೊಗೆತಟ್ಟಿಗಳಂತಹವು ಅಡುಗೆಯ ಮನೆಯನ್ನು ಸೇರಿಕೊಂಡು ಸಾಂಸ್ಕೃತಿಕವಾದ ಜೀವಂತಿಕೆಯನ್ನು ಮನುಷ್ಯನಲ್ಲಿ ತುಂಬುವ ಜೊತೆ ಸತ್ವಯುತವಾದ ಆಹಾರ ವನ್ನು ಹುಟ್ಟು ಹಾಕುವ ಮೂಲಕ ದೇಹಕ್ಕೆ ಬಲವನ್ನು ಗಟ್ಟಿತನವನ್ನು ಒದಗಿಸಿವ ನೆಲೆಯಿಂದ ಜೀವದ ಬಾಳಿಕೆಯನ್ನು ದೀರ್ಘ ವಾಗಿಸಿದ್ದವು. ಘನವಾದ ಮೂಟೆಯನ್ನು ಹೊತ್ತು ಎಲ್ಲಿಂದ ಎಲ್ಲಿಗೋ ನಡೆಯುತ್ತಿದ್ದರು, ನೆಲವನ್ನು ಗುದ್ದಿ ನೀರು ತೆಗೆಯುತ್ತಿದ್ದರು, ಬಿಸಿಲು ಮಳೆ ಅಂಬೋ ಪರಿಸರದಲ್ಲೂ ದುಡಿದು ಉಣ್ಣುವ ತ್ರಾಣವಿತ್ತು ಸಾಮಾನ್ಯವಾಗಿ ನೂರಕ್ಕಿಂತ ಹೆಚ್ಚು ಕಾಲ ಬದುಕುತ್ತಿದ್ದರು.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ನೀರಿನ ಮೇಲಿನ ಗುಳ್ಳೆ ಇದ್ದ ಹಾಗೆ ಅನ್ನೋ ಗಾದೆ ಮಾತು ಈಗಿನ ನಮ್ಮಗಳ ಬದುಕಿಗೆ ಹತ್ತಿರ ಅನ್ನಿಸುತ್ತದೆ. ಅದಷ್ಟೋ ಜನ ಯುವಕರೇ ಹೃದಯ ಸ್ತಂಭನದಿಂದ ಸಾವು ಕಾಣುತ್ತಿದ್ದಾರೆ. ನೂರೊಂದು ರೋಗಗಳು ಬಾಲ್ಯದಿಂದಲೇ ಪ್ರಾರಂಭವಾಗಿದೆ, ಬೊಜ್ಜು, ತಲೆ ಕೂದಲು ಬೆಳ್ಳಾಗುವಿಕೆ, ನಿತ್ರಾಣಗಳು, ಸಂತಾನವಿಲ್ಲದಿರುವುದು ಇಂದಿನ ಪ್ರಮುಖ ಸಮಸ್ಯೆಗಳು ಮನಷ್ಯನೊಂದಿಗೆ ಬೆಸೆದುಕೊಂಡಿದೆ.

ಆಹಾರ ವ್ಯವಸ್ಥೆಯಲ್ಲಿ ಉಂಟಾಗಿರುವ ಪಲ್ಲಟಗಳು, ರಾಜಕೀಯ ನೆಲೆಯ ಬಂಡವಾಳ ಕೇಂದ್ರಿತ ಆಹಾರ ಕ್ರಮಗಳು ಜೀವನ ವಿಧಾನದಲ್ಲಿ ಹೊಕ್ಕಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಆಹಾರವನ್ನು ರೂಪಿಸುವ ಅಡುಗೆಯ ಮನೆಯ ಪರಿಸರವು ಸತ್ವಯುತವಾದ ಪದಾರ್ಥವನ್ನೇ ಹುಟ್ಟು ಹಾಕುವ ಕಾರ್ಯವನ್ನು ಮಾಡುತ್ತಿತ್ತು. ಇಲ್ಲಿ ಗಂಜಿಯನ್ನು ಉಪ್ಪು ಮೆಣಸಿನಲ್ಲಿ ಉಂಡರೂ ಅದು ದೇಹವನ್ನು ಕೆಡಿಸುತ್ತಿರಲಿಲ್ಲ ಬದಲಿಗೆ ಮೈಗೆ ಹತ್ತುತಿತ್ತು. ನೆಲದ ಸತ್ವವಿರುವ ಆಹಾರ ಮನೆ ಮಂದಿಯನ್ನು ಒಟ್ಟಿಗೆ ಉಣ್ಣುವ ಪರಿಸರವನ್ನು ಹುಟ್ಟು ಹಾಕಿತ್ತು. ಯಾವಾಗ ಮನೆಯಿಂದ ಹೊರಬಿದ್ದು ಸಮಯದ ಸಂಕಟದಲ್ಲಿ ದುಡಿಯುವುದಕ್ಕೆ ನಿಂತವರಿಗೆ ಹೊಟೆಲುಗಳು, ಬೀದಿ ಬದಿಯ ಅಂಗಡಿಗಳು ಹಸಿವನ್ನು ನೀಗಿಸುವುದಕ್ಕೆ ಶುರು ಮಾಡಿದವು. ಬಂಡವಾಳ ಕೇಂದ್ರಿತವಾದ ಕೆಲವು ಹೋಟೆಲುಗಳು ಬಾಯಿಗೆ ರುಚಿಯನ್ನು ಒದಗಿಸುವ ನೆಲೆಯಿಂದ ಭಿನ್ನವಾದ ತಿಂಡಿ–ತಿನಿಸನ್ನು ಹುಟ್ಟುಹಾಕಿ ಜನರ ಮನಸ್ಸಿನಲ್ಲಿ ನಿಂತು ಬಿಟ್ಟವು. ಇಲ್ಲಿ ಆಹಾರದ ಮೌಲ್ಯಯುತ ಸತ್ವಕ್ಕಿಂತ ಹಣದ ಆಸೆಯೇ ಪ್ರಧಾನವಾಗಿದ್ದು ನಮ್ಮ ದುರಂತ.



ಸಮಾಜದಲ್ಲಿ ಗಂಡು–ಹೆಣ್ಣುಗಳು ಆಹಾರವನ್ನು ಹುಟ್ಟು ಹಾಕುವ ಕಾರ್ಯವನ್ನು ಮಾಡುವ ಸ್ವರೂಪದಲ್ಲಿ ಪಲ್ಲಟಗಳು ಹುಟ್ಟಿಕೊಂಡ ತರುವಾಯ ನೆಲದ ಸತ್ವ ಹೊಂದಿರುವ ಪದಾರ್ಥಗಳನ್ನು ಅಡಿಗೆ ಮಾಡುವ, ಹುಡುಕುವ ನೆಲೆಗಳು ತಪ್ಪಿ ಹೋದವು. ಉದ್ಯೋಗ, ನಗರದೊಂದಿಗಿನ ನಿಕಟವಾದ ಸಂಬಂಧ, ಬಂಡವಾಳಕೇಂದ್ರಿತ ಆಹಾರ ವ್ಯವಸ್ಥೆಯು ಮನೆ–ಮನವನ್ನು ತಲುಪಿರುವ ಕಾರಣ ನಾವುಗಳು ನಮ್ಮ ನೆಲದ ಸತ್ವಯುತವಾದ ಆಹಾರ ಅನ್ನುವುದನ್ನು ಬೆಳೆಯುವ ಮತ್ತು ಹುಡುಕುವ ಕಡೆಗೆ ಯೋಚಿಸುತ್ತಿಲ್ಲ. ಒಲೆಯನ್ನು ಹತ್ತಿಸಿ ಅಕ್ಕಿ–ಬೇಳೆಯನ್ನು ಬೇಯಿಸಿ ಉಣ್ಣುವ ಸಾಂಸ್ಕೃತಿಕ ಸಂದರ್ಭವನ್ನು ಮರೆತು ಬಿಟ್ಟು ಹೊಟ್ಟೆ ತುಂಬಿದರಾಯಿತು ಅನ್ನೋ ಮನೋಭಾವದಿಂದ ಸ್ವಿಗ್ಗಿ, ಜೊಮೊಟೋ ಇತ್ಯಾದಿಗಳಲ್ಲಿ ಬುಕ್ಕು ಮಾಡಿ ಆಹಾರ ಎನ್ನುವುದನ್ನು ತರಿಸಿಕೊಂಡು ತಿನ್ನುತ್ತಿದ್ದೇವೆ. ಇದರಿಂದ ತಮ್ಮ ದೇಹ ಸ್ವರೂಪ, ಅವಸ್ಥೆಗಳು ಪಲ್ಲಟವಾಗುತ್ತಿದೆ ಅನ್ನುವ ಅರಿವು ಸದ್ಯಕ್ಕೆ ಭಾದಿಸಿದಂತಿಲ್ಲ.

ನಮ್ಮ ಹಿರಿಯ ತಲೆಗಳು ತಮ್ಮ ಪರಿಸರದಲ್ಲಿ ಕಾಲದ ನೆಲೆಯಲ್ಲಿ ಸಿಗುವ ಅಕ್ಕಿ, ರಾಗಿ, ಸೊಪ್ಪು, ನಾರು–ಬೇರು, ಕಾಯಿ–ಹಣ್ಣು ಇತ್ಯಾದಿ ಉತ್ಪನ್ನವನ್ನು ಕುಟ್ಟಿ ಅರೆದು ಬೇಯಿಸಿ ಉಣ್ಣುತ್ತಿದ್ದರು. ಮನುಷ್ಯ ಪ್ರಕೃತಿಯ ಭಾಗವಾದ ಕಾರಣ ಋತುಮಾನಕ್ಕೆ ಅನುಗುಣವಾಗಿ ಆಹಾರವನ್ನು ಉಣ್ಣುವ ಮೂಲಕ ಶರೀರದ ಸತ್ವವನ್ನು ಕಾಪಾಡಿ ಕೊಂಡಿರುತ್ತಿದ್ದ. ಈಗ ನಮ್ಮ ನಡುವೆ ಹಸಿರು ಪ್ರಕೃತಿಯಾಗಲಿ ಅದರ ಉತ್ಪನ್ನವಾಗಲಿ ಬಹುವಾಗಿ ಇಲ್ಲ. ಇದ್ದರೂ ಅದನ್ನು ಅಡುಗೆಯಾಗಿಸುವ, ಉಣ್ಣು ಬಗೆ ಇಂದಿನ ತಲೆಮಾರಿನವರಿಗೆ ತಿಳಿಯುವುದಿಲ್ಲ. ಹಸಿವಿಗೆ ಹೊತ್ತು, ಉಣ್ಣುವ ಸಮಯ ಎನ್ನುವುದು ಇತ್ತು. ಈಗ ಅದು ಲಯ ತಪ್ಪಿದೆ ತಮಗೆ ಹಸಿವು ಕಾಣಿಸಿದಾಗ ಮತ್ತು ತಮಗೆ ಬೇಕಾದ ಪದಾರ್ಥವನ್ನು ಅನ್ಲೈನ್ ಮೂಲಕ ತರಿಸಿಕೊಂಡು ಉಣ್ಣುವ ಪರಿಪಾಟ ಹುಟ್ಟಿಕೊಂಡಿದೆ. ಇಲ್ಲಿ ನಮ್ಮ ಅಡುಗೆ ಮನೆಯ ತಟ್ಟೆ–ಲೋಟ–ನೀರು ಇತ್ಯಾದಿಗಳೆಲ್ಲ ಅಗತ್ಯವಿಲ್ಲ. ಡೆಲಿವರಿ ಬಾಯ್ ತಂದುಕೊಟ್ಟದ್ದನ್ನು ತಿಂದರಾಯಿತು ಉಳಿದನ್ನು ಎಸೆದರಾಯಿತು ಎನ್ನುವ ಗೀಳು ನಮ್ಮ ಹಳ್ಳಿಯನ್ನು ಪ್ರವೇಶ ಪಡೆದಿದೆ. ಮೊನ್ನೆ ಒಬ್ಬರು "ಸರ್ ನನ್ನ ಹುಟ್ಟು ಹಬ್ಬ. ನೀವು ಏನು ಉಣ್ಣುತ್ತೀರಿ ಹೇಳಿ. ನಿಮ್ಮ ಮನೆಗೆ ಸ್ವಿಗ್ಗಿ ಮೂಲಕ ಕಳಿಸುತ್ತೇನೆ ನೀವು ಮನೆಯಲ್ಲಿ ಅಡುಗೆ ಮಾಡುವುದು ಬೇಡ" ಅಂತ ಹೇಳಿದರು. ಈಗ ನಾವು ಎಷ್ಟು ಮುಂದುವರಿದ್ದಿದ್ದೇವೆ ಅಂದರೆ ಎಲ್ಲರೂ ಕೂಡಿ ಉಣ್ಣುವುದನ್ನೇ ಮರೆತು ಬಿಟ್ಟಿದ್ದೇವೆ. ಮುಂದೊಂದು ದಿನ ನಮ್ಮ ಮನೆಯಲ್ಲಿ ಜಾಗ ಪಡೆದಿರುವ ಅಡುಗೆ ಮನೆಯೇ ಇಲ್ಲವಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಇದಕ್ಕಿಂತ ಕ್ರೂರವಾದದ್ದು ಅಂದರೇ ನಮ್ಮ ದೇಹವು ರೋಗಗಳ ಕೇಂದ್ರವಾಗಿ ಐವತ್ತು ವರ್ಷದ ಜೀವನದ ಗುಣಮಟ್ಟವನ್ನೇ ಕಳೆದುಕೊಂಡು ಮನುಷ್ಯ ಸಮುದಾಯವನ್ನೇ ಅಂತ್ಯದ ದಾರಿಗೆ ನಡೆಸುತ್ತಿದ್ದೇವೆ ಅನ್ನುವ ಅರಿವು ನಮ್ಮದಾಗಬೇಕು.

# ಸಂತೋಷವೇ ಆರೋಗ್ಯಕ್ಕೆ ಮದ್ದು

ತುಂಬು ಕುಟುಂಬದಲ್ಲಿ ಕುಳಿತು ನಗುತ್ತಿದ್ದ ಕಾಲ ಇಂದು ಕಾಣಸಿಗುತ್ತಿಲ್ಲ ಕಾರಣ ಅದೇನೇ ಇರಬಹುದು? ಆದರೆ ದುಡ್ಡು ಕೊಟ್ಟು ನಗುವ ಕಾಲವಂತು ಬಂದಿದೆ ಅದಂತೂ ಸತ್ಯ.ನಗುವಿನ ಯಾವುದೇ ಮೂಲವಾದರೂ ಸರಿ ಅದಕ್ಕೆ ನಾವಿಂದು ತೆರಿಗೆ ತರಬೇಕಾಗಿದೆ.

ಕೌಟುಂಬಿಕ, ಸಾಮಾಜಿಕ,ಆರ್ಥಿಕ ಇನ್ನಿತರೆ ಒತ್ತಡಗಳಿಂದ ಒಬ್ಬರಿಗೊಬ್ಬರು ಭೇಟಿ ಮಾಡಿ ಸಂತೋಷಪಡುವ ಕಾಲವಂತು ಇಂದಿಲ್ಲ ಕಾರಣ ಓಟ...ಸಮಯದೊಂದಿಗೆ ಜೂಟಾಟ...ಒತ್ತಡದ ವಿಪರೀತ ಕಾಟ ಅದಕ್ಕೆಲ್ಲ ಕಾರಣ ನಾವೇ ಮತ್ಯರನ್ನೂ ದೂಷಿಸುವ ಅಗತ್ಯವಿಲ್ಲ. ಮನಬಿಚ್ಚಿ ಸಂತೋಷದಿಂದ ನಗುವುದರಿಂದ ಅನೇಕ ಮಾನಸಿಕ ಮತ್ತು ದೈಹಿಕ ಆರೋಗ್ಯಕರ ಲಾಭಗಳು ಲಭ್ಯ.

ಹೌದು..! ಒಂದು ನಗು ಸುಮಾರು 10 ರಿಂದ 40 ಕ್ಯಾಲೊರಿಗಳನ್ನು ಕರಗಿಸಲು ಸಾಧ್ಯವಾಗುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ ಆಗಿದ್ದಲ್ಲಿ, ಸಂತೋಷವು ಎಷ್ಟು ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ ಎಂದು ಊಹಿಸಿ! ಸಂತೋಷವು ಕೇವಲ ಭಾವನೆಯಲ್ಲ; ಅದು ಮಾನಸಿಕ ಮತ್ತು ದೈಹಿಕ ಯೋಗಕ್ಷೇಮದ ಉತ್ತಮ ಮೂಲವಾಗಿದೆ. ಸಾಮಾನ್ಯ ವಾಗಿ, ದೇಹತೂಕ ನಿರ್ವಹಣೆ, ಆಯಾಸದ ಅಸ್ವಸ್ಥತೆಗಳು, ಮನಸ್ಥಿತಿಯ ಬದಲಾವಣೆ ಗಳು ಮತ್ತು ಕೆಟ್ಟ ಗಮನವನ್ನು ಸಂತೋಷ ದಿಂದ ನಿಭಾಯಿಸಬಹು ದಾಗಿದೆ.

ದೈನಂದಿನ ಒತ್ತಡ ಮನಸ್ಸಿನ ಶಾಂತಿಯನ್ನು ಕದಿಯುವ ಕಳ್ಳ! ಇವನು ನಮ್ಮನ್ನು ಉತ್ತಮ ನಿದ್ರೆಯಿಂದ ದೂರ ವಿಡ ಬಹುದು. ಇದಕ್ಕೆ ವಿರುದ್ಧ ವಾಗಿ, ಸಂತೋಷವು ಆಳವಾದ ಮತ್ತು ತೃಪ್ತಿಕರ ನಿದ್ರೆಯ ಒಳ್ಳೆಯತನವನ್ನು ನಿಮಗೆ ತರಲು ವೇಗ ವರ್ಧಕವಾಗಿ ಕಾರ್ಯ ನಿರ್ವ ಹಿಸುತ್ತದೆ ಅದನ್ನು ಅರಿತು ಸಂತೋಷವನ್ನು ಅಳವಡಿಸಿ ಕೊಳ್ಳಬೇಕಾಗಿದೆ. ಇಂದಿನ ಎಲ್ಲಾ ಕಾಯಿಲೆಗಳಿಗೂ ಮೂಲ ಕಾರಣ ರೋಗನಿರೋಧಕ ಶಕ್ತಿಯ ಕೊರತೆ.




ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಮಾನವನ ರೋಗನಿರೋಧಕ ವ್ಯವಸ್ಥೆ ಮತ್ತು ಒತ್ತಡದ ಮಟ್ಟವನ್ನು ನಿಯಂತ್ರಿಸುವ ಹೈಪೋಥಾಲಾಮಿಕ್–ಪಿಟ್ಯುಟರಿ–ಮೂತ್ರ ಜನ ಕಾಂಗದ (ಹೆಚ್ಪಿಎ) ಅಕ್ಷದ ಮೇಲೆ ಸಂತೋಷದ ಪ್ರಭಾವವಿದೆ ಆದ್ದರಿಂದ ಮೂಲಭೂತವಾಗಿ, ಸಂತೋಷವಾಗಿರುವುದು ಆರೋಗ್ಯ ವಾಗಿರುವುದಕ್ಕೆ ಸಂಬಂಧಿಸಿದೆ ಹಾಗೂ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿ ಸಂರಕ್ಷಿಸುತ್ತದೆ. ಇದ್ದಕ್ಕಿದ್ದಂತೆ ಹೃದಯಾಘಾತಕ್ಕೆ ಒಳಗಾಗುವ ಸಂಖ್ಯೆ ಅಧಿಕ ಇದಕ್ಕೆ ವಯಸ್ಸಿನ ಮಿತಿಯೇ ಇಲ್ಲದಂತಾಗಿದೆ ಹೌದಲ್ಲವೇ? ಕಳೆದುಕೊಂಡ ವರಿಗಷ್ಟೇ ಗೊತ್ತು ನೋವಿನ ಬೆಲೆ.

ಸಂತೋಷದಿಂದ ಕೂಡಿದ ದೈನಂದಿನ ಜೀವನ ಹೃದಯ ಕಾಯಿಲೆಗಳಿಂದ ನಮ್ಮನ್ನು ದೂರವಿಡುತ್ತದೆ ಇದಕ್ಕೆ 2005 ರಲ್ಲಿ ನಡೆದ ಸಂಶೋಧನಾ ಅಧ್ಯಯನವು ರಕ್ತದೊತ್ತಡವನ್ನು ನಿಯಂತ್ರಿಸುವಲ್ಲಿ ಮತ್ತು ಹೃದಯ ಬಡಿತವನ್ನು ಸರಿದೂಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಸಾಬೀತುಪಡಿಸಿದೆ ಇದರರ್ಥ ಸಂತೋಷ ವಾಗಿರುವುದನ್ನು ಅಳವಡಿಸಿಕೊಳ್ಳಿ ಎಂದು. ಒಟ್ಟಾರೆಯಾಗಿ, ಸಕಾರಾತ್ಮಕ ಭಾವನೆಗಳು ಹೃದಯದ ಆರೋಗ್ಯವನ್ನು ಸುಧಾರಿಸಲು ಇಂಧನವಾಗಿ ಕಾರ್ಯನಿರ್ವಹಿಸುತ್ತವೆ.

ಸಹಜವಾಗಿ ನಾವು ಬಿದ್ದಾಗ ಗಾಯವಾಗುತ್ತದೆ ಆಗ ಉರಿಯೂತ ಉಂಟಾಗುತ್ತದೆ ಅಲ್ಲವೇ!ಇದು ಹಾನಿಗೆ ದೇಹದ ಪ್ರತಿಕ್ರಿಯೆಯಾಗಿದೆ. ನೋವಿನ ಸಂದರ್ಭದಲ್ಲಿ ಸಹಜ ಸಂತೋಷವೂ ಚೇತರಿಕೆಯ ಪ್ರಕ್ರಿಯೆಯಲ್ಲಿ ಸಹಾಯಕಾರಿಯಾಗಿದೆ. ಇದು ಸಂಪೂರ್ಣವಾಗಿ ವಾಸಿ ಮಾಡದೇ ಇರಬಹುದು ಆದರೆ ಆ ಸಂದರ್ಭದಲ್ಲಿ ನೋವನ್ನು ಕಡಿಮೆ ಪ್ರಮಾಣದಲ್ಲಿ ನೀಡಲ್ಪಟ್ಟು ನಗುವಿನೊಂದಿಗೆ ನೋವಿನ ಪ್ರಮಾಣ ಗಮನಕ್ಕೆ ಬರುವುದಿಲ್ಲ ಇದರೊಂದಿಗೆ ಶಕ್ತಿಯನ್ನು ಮರಳಿ ಪಡೆಯಲು ಸಹಾಯವಾಗುತ್ತದೆ.



ಮನೋರಂಜನೆ, ಸಂತೃಪ್ತಿ, ಕೃತಜ್ಞತೆ ಮತ್ತು ಪ್ರೀತಿ ಸಂತೋಷದ ಪ್ರಮುಖ ಪ್ರಚೋದಕಗಳಾಗಿವೆ ಮತ್ತು ಒಬ್ಬ ವ್ಯಕ್ತಿಯು ಈ ಎಲ್ಲಾ ಭಾವನೆಗಳನ್ನು ನಿಯಮಿತ ಮಧ್ಯಂತರಗಳಲ್ಲಿ ಅನುಭವಿಸಿದರೆ, ಅವನು ಅಥವಾ ಅವಳು ದೀರ್ಘ,ಸಂತೋಷದ ಜೀವನವನ್ನು ಹೊಂದಿರುತ್ತಾರೆ.

ಸಾಮಾನ್ಯವಾಗಿ ನಮ್ಮ ಪ್ರೀತಿಪಾತ್ರರ ದೀರ್ಘ ಮತ್ತು ಸಂತೋಷದ ಜೀವನಕ್ಕಾಗಿ ಹಾರೈಸುತ್ತೇವೆ ಮತ್ತು ಪ್ರಾರ್ಥಿಸುತ್ತೇವೆ,ಆದರೆ ನಾವು ಅವರ ಜೀವನವನ್ನು ಸಂತೋಷದಿಂದ ತುಂಬಲು ವಿಫಲವಾ ದರೆ, ಅವರು ದೀರ್ಘ ಜೀವನವನ್ನು ಹೊಂದಲು ಸಾಧ್ಯವಾಗದಿ ರಬಹುದು. ಹೀಗಾಗಿ, ಸಂತೋಷದ ಮನಸ್ಥಿತಿಆರೋಗ್ಯಕರಜೀವನಶೈಲಿಯನ್ನು ನಡೆಸುತ್ತದೆ ಹಾಗೂ ನೀವು ಅನಾರೋಗ್ಯಕರ ಆಯ್ಕೆಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ ಮತ್ತು ಸಕಾರಾತ್ಮಕ ಕಂಪನಗಳ ಉಪಸ್ಥಿತಿಯು ವ್ಯಕ್ತಿಯು ಒತ್ತಡ–ಮುಕ್ತ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ, ಇದು ಜೀವಿತಾವಧಿಯನ್ನು ಹೆಚ್ಚಿಸುತ್ತದೆ.

ನಮ್ಮ ಮೂತ್ರಜನಕಾಂಗದ ಗ್ರಂಥಿಗಳು ಕಾರ್ಟಿಸೋಲ್ ಅನ್ನು ಬಿಡುಗಡೆ ಮಾಡುತ್ತವೆ ಇದು ಒತ್ತಡದ ಹಾರ್ಮೋನ್.ಇದು ಒತ್ತಡದ ಸಂದರ್ಭಗಳಲ್ಲಿ ಪ್ರತಿಕ್ರಿಯಿಸಲು ಸಹಾಯಕ ಆದರೆ,ಇದರ ದೀರ್ಘಕಾಲೀನ ಉಪಸ್ಥಿತಿಯು ಹಾನಿಕಾರಕವಾಗಬಹುದು ಆದ್ದರಿಂದ ಸಂತೋಷ ಮತ್ತು ಸಂತೋಷದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಇದನ್ನು ಕಡಿತಗೊಳಿಸುತ್ತದೆ ಹಾಗೂ ರೋಗಗಳು ಮತ್ತು ಆರೋಗ್ಯ–ಅಪಾಯಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ.

ಇಷ್ಟೆಲ್ಲಾ ಆರೋಗ್ಯಕರ ಲಾಭಗಳನ್ನು ಹೊಂದಿರುವ ಸಂತೋಷವನ್ನು ಆಸ್ವಾದಿಸಲು ಸ್ವಾಧವಿಲ್ಲದವರಂತೆ ಬದುಕುತ್ತಿದ್ದೇವೆ ಅಲ್ಲವೇ? ಇನ್ನಾದರೂ ಮನಸ್ಥಿತಿ ಹಾಗೂ ಮನೆ ಸ್ಥಿತಿಯನ್ನು ಬದಲಾಯಿಸಿಕೊಂಡು ಒಂದಷ್ಟು ಕಾಲ ಆರೋಗ್ಯದಿಂದ ಬದುಕಿ ಬಿಡೋಣ ಏನಂತೀರಿ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಇವರು ನೆನಪಾಗುತ್ತಾರೆ

ಚುಚ್ಚುವರು ಬಂದಾಗ
ಮೆಚ್ಚಿದವರು
ನೆನಪಾಗುತ್ತಾರೆ

ಕಿತ್ತು ತಿನ್ನುವರು ಬಂದಾಗ
ಕೊಟ್ಟುತಿಂದವರು
ನೆನಪಾಗುತ್ತಾರೆ

ಅಶಾಂತಿ ಮಾಡುವವರು
ಬಂದಾಗ ಶಾಂತವಾಗಿದ್ದವರು
ನೆನಪಾಗುತ್ತಾರೆ

ಸ್ವಾರ್ಥಿಗಳು ಬಂದಾಗ
ನಿಸ್ವಾರ್ಥಿಗಳು
ನೆನಪಾಗುತ್ತಾರೆ

ನೋಯಿಸುವವರು
ಬಂದಾಗ ಸಮಾಧಾನಗಳು
ನೆನಪಾಗುತ್ತಾರೆ

ಹೃದಯ ಹೀನರು
ಬಂದಾಗ ಹೃದಯವಂತರು
ನೆನಪಾಗುತ್ತಾರೆ

ಪ್ರೀತಿ ಸ್ನೇಹವ ಕೊಂದವರು
ಬಂದಾಗ ಪ್ರೀತಿ ಸ್ನೇಹ
ಕೊಟ್ಟವರು ನೆನಪಾಗುತ್ತಾರೆ

ಹೆಸರು ಕೆಡಿಸುವವರು
ಬಂದಾಗ ಹೆಸರು
ಉಳಿಸಿದವರು ನೆನಪಾಗುತ್ತಾರೆ

ಉಸಿರು ನಿಲ್ಲಿಸಿದವರು
ಬಂದಾಗ ಉಸಿರು ಕೊಟ್ಟವರು
ನೆನಪಾಗುತ್ತಾರೆ

ಹುಚ್ಚು ಇಡಿಸುವರು
ಬಂದಾಗ ಹುಚ್ಚು ಬಿಡಿಸಿದವರು
ನೆನಪಾಗುತ್ತದೆ

ಪಾಪಿಗಳು ಹೆಚ್ಚಾದಾಗ
ಪುಣ್ಯವಂತರುಗಳು
ನೆನಪಾಗುತ್ತದೆ

ಕೂಗಾಡುವವರು ಬಂದಾಗ
ಮೌನವಾಗಿದ್ದವರು
ನೆನಪಾಗುತ್ತದೆ

ದಾರಿ ತಪ್ಪಿಸುವರು
ಬಂದಾಗ ದಾರಿ ತೋರಿದವರ
ನೆನಪಾಗುತ್ತದೆ

ಸುಳ್ಳು ಹೇಳುವವರು
ಬಂದಾಗ ಸತ್ಯ ಹೇಳಿದವರ
ನೆನಪಾಗುತ್ತದೆ


– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿಗಾಜಾಪುರ

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

**25–02–2025 – ಮಂಗಳವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ವ್ಯತಾಪತಾ |
| ಕರಣ | : ವರಿಯಾಣ |
| ಸೂರ್ಯೋದಯ | : 06:53:06 |
| ಸೂರ್ಯಾಸ್ತ | : 18:27:04 |
| ರಾಹು ಕಾಲ | : 15:34–17:00 |
| ಯಮಘಂಡ ಕಾಲ | : 09:47–11:13 |
| ಗುಳಿಕ ಕಾಲ | : 12:40–14:07 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 24–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1609.08 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7983 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 35.793 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.35 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 763 ಕ್ಯುಸೆಕ್ |
| ಸಾಮರ್ಥ್ಯ | 8.959 ಟಿಎಂಸಿ |

# ತಂದೆಯ ಆದರ್ಶಗಳು ಮಕ್ಕಳಿಗೆ ದಾರಿದೀಪ

ಓರ್ವ ಪುರುಷ ಒಳ್ಳೆಯ ಪತಿಯಾಗದ ಹೊರತು ಒಳ್ಳೆಯ ತಂದೆಯಾಗಲಾರ, ಕಾರಣ ಮಕ್ಕಳು ತಮ್ಮ ತಂದೆ ತನ್ನ ಪತ್ನಿಯೊಂದಿಗೆ ಅಂದರೆ ತಮ್ಮ ತಾಯಿಯೊಂದಿಗೆ ನಡೆದುಕೊಳ್ಳುವ ರೀತಿಯನ್ನು ಗ್ರಹಿಸುವ ಮೂಲಕ ಕಲಿಯುತ್ತಾರೆ. ನಿಮ್ಮ ಪತ್ನಿಯೊಂದಿಗಿನ ನಿಮ್ಮ ನಡವಳಿಕೆಯೇ ನಿಮ್ಮ ಮಕ್ಕಳ ಬದುಕಿನ ಮೂಲ ಬುನಾದಿಯಾಗಿರುತ್ತವೆ. ನಿಮ್ಮ ನಡವಳಿಕೆಯ ಮೂಲಕ ಮಕ್ಕಳು ಸಾಮಾಜಿಕ ಸಂಬಂಧಗಳು ಗೌರವ ಮತ್ತು ಪ್ರೀತಿಯ ಭಾವವನ್ನು ಕಲಿಯುತ್ತವೆ.

ಪುರುಷನಾಗಿ ತಮ್ಮ ಪತ್ನಿಯನ್ನು ಗೌರವಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ನಿಮ್ಮ ಕುಟುಂಬಕ್ಕಾಗಿ ನೀವು ಹಣವನ್ನು ದುಡಿಯಬಹುದು ಆದರೆ ಕೌಟುಂಬಿಕ ಪೋಷಣೆ ಮಾಡುವವಳು ಹೆಣ್ಣು ಮಗಳು ಮಾತ್ರ. ತನ್ನೆಲ್ಲ ಶಕ್ತಿ, ಪ್ರೀತಿ, ವಾತ್ಸಲ್ಯ, ಅಕ್ಕರೆಯ ಭಾವನೆಗಳನ್ನು ಹರಿಸಿ ಆಕೆ ಕುಟುಂಬದ ಸದಸ್ಯರಿಗೆ ಬದುಕಲು ಒಂದು ಸುರಕ್ಷಿತವಾದ ಮತ್ತು ಪ್ರೀತಿಯ ವಾಸಸ್ಥಾನವನ್ನು ನೀಡುತ್ತಾಳೆ. ಆಕೆಯನ್ನು ಗೌರವಿಸುವ ಮೂಲಕ ನೀವು ನಿಮ್ಮ ಕುಟುಂಬದ ಶಾಂತಿ ಮತ್ತು ಸಾಮರಸ್ಯವನ್ನು ಕಾಪಾಡುತ್ತೀರಿ.

ನಿಮ್ಮ ಪತ್ನಿ ಕೇವಲ ನಿಮ್ಮ ಸಂಗಾತಿಯಲ್ಲ... ಆಕೆ ನಿಮ್ಮೊಂದಿಗೆ ಮಕ್ಕಳ ಭವಿಷ್ಯವನ್ನು ರೂಪಿಸುವ ರೂವಾರಿಯಾಗಿರುವುದರಿಂದ ಆಕೆಯ ಮಾನಸಿಕ ಆರೋಗ್ಯ, ಶಾಂತಿ, ಸಂತೋಷಗಳು ಕುಟುಂಬದ ಅದರಲ್ಲೂ ವಿಶೇಷವಾಗಿ ಮಕ್ಕಳ ಮೇಲೆ ಬಹಳ ಪರಿಣಾಮವನ್ನು ಬೀರುತ್ತವೆ. ಆಕೆಯ ಭಾವನೆಗಳಿಗೆ ಬೆಲೆ ಕೊಡದೆ, ಆಕೆಯ ಶ್ರಮಕ್ಕೆ ಮೆಚ್ಚುಗೆ ಸೂಸದೆ ಆಕೆಯನ್ನು ಕಡೆಗಣಿಸಿದಾಗ ಕುಟುಂಬದ ಭದ್ರ ಬುನಾದಿಯಲ್ಲಿ ಬಿರುಕನ್ನುಂಟು ಮಾಡಿದಂತಾಗುತ್ತದೆ.

ನಿಮ್ಮ ಪತ್ನಿಯ ಭಾವನೆಗಳಿಗೆ ಬೆಲೆ ಕೊಡಿ.. ಆಕೆಯ ಹೃದಯದಾಳದ ಮಾತುಗಳಿಗೆ ಕಿವಿ ಕೊಡಿ. ಆಕೆ ತನ್ನ ಭಾವನೆಗಳನ್ನು ಹೇಳಿಕೊಳ್ಳುವಾಗ ಅದೆಷ್ಟೇ ಅಸಮಾಧಾನ ಎನಿಸಿದರೂ ಕುಟುಂಬದ ಒಳಿತಿಗಾಗಿ ಆಕೆ ಹೇಳುವ ಎಲ್ಲ ಮಾತುಗಳನ್ನು ಯಾವುದೇ ರೀತಿಯ ಪುರುಷ ಅಹಮಿಕೆಗಳಿಗೆ ಒಳಗಾಗದೆ ಕೇಳಿ. ಆಕೆಯ ಮಾತುಗಳು ನಿಮಗೆ ಹೊರೆಯಲ್ಲ ಬದಲಾಗಿ ಆಕೆಯ ಹೃದಯದ ದನಿಯಾಗಿರುತ್ತದೆ. ಸಹಾನುಭೂತಿಯಿಂದ ನೀವು ಆಕೆಯ ಮಾತುಗಳನ್ನು ಆಲಿಸಿದಾಗ ನಿಮ್ಮಿಬ್ಬರ ನಡುವೆ ಒಂದು ಸುಂದರವಾದ ಬಂಧ ಏರ್ಪಡುತ್ತದೆ. ಅದು ನಿಮ್ಮ ಮಕ್ಕಳ ಬೆಳವಣಿಗೆಗೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮಕ್ಕಳು ಪ್ರೀತಿ ಗೌರವ ಮತ್ತು ಸಮಾನತೆಯನ್ನು ಕಲಿಯುವುದು ತನ್ನ ತಂದೆ ತನ್ನ ತಾಯಿಯೊಂದಿಗೆ ನಡೆದುಕೊಳ್ಳುವುದನ್ನು ನೋಡುವ ಮೂಲಕ. ಓರ್ವ ವ್ಯಕ್ತಿ ತನ್ನ ಪತ್ನಿಗೆ ಪ್ರೋತ್ಸಾಹ ನೀಡುವ, ಗೌರವಿಸುವ ಮತ್ತು ಕುಟುಂಬಕ್ಕೆ ಆಕೆ ನೀಡುವ ಸಹಯೋಗವನ್ನು ಗುರುತಿಸುವುದನ್ನು ನೋಡಿದಾಗ ಮಕ್ಕಳು ತನ್ನ ತಂದೆಯ ನಡವಳಿಕೆಗಳನ್ನು ತಮ್ಮದಾಗಿಸಿಕೊಳ್ಳುವರು. ಬದಲಾಗಿ ತಂದೆ ತನ್ನ ಪತ್ನಿಯನ್ನು ಕೀಳಾಗಿ ಕಾಣುವ, ತಿರಸ್ಕಾರ ಮನೋಭಾವದಿಂದ ನೋಡುವ ಅಗೌರವದಿಂದ ನಡೆಸಿಕೊಳ್ಳುವುದನ್ನು ನೋಡಿ ಗ್ರಹಿಸುವ ಮಕ್ಕಳು ತಮ್ಮ ಬದುಕಿನಲ್ಲಿಯೂ ಮುಂದೆ ಇದೇ ರೀತಿಯ ಸಂಬಂಧಗಳನ್ನು ಹೊಂದುತ್ತಾರೆ. ತನ್ನ ತಂದೆ ತಾಯಿಯೊಂದಿಗೆ ಪ್ರೀತಿಯಿಂದ ವಿಶ್ವಾಸದಿಂದ ನಡೆದುಕೊಳ್ಳುವು ದನ್ನು ನೋಡುವ ಮಕ್ಕಳು ತಾವು ಕೂಡ ಮುಂದೆ ತಮ್ಮ ಬದುಕಿನಲ್ಲಿ ಬರುವ ಹೆಣ್ಣು ಮಕ್ಕಳಿಗೆ ಗೌರವಾದರವನ್ನು ನೀಡುತ್ತಾರೆ.

ತಂದೆ ತನ್ನ ಮಕ್ಕಳಿಗೆ ಶಿಕ್ಷಕನಾಗಿ ಪ್ರೀತಿಯ ಪಾಠವನ್ನು ಮಕ್ಕಳಿಗೆ ಹೇಳಿಕೊಡಬೇಕು. ತಾಯಿಯ ಪ್ರೀತಿ, ಅಭಯ ಆಕೆಯ ಕನಸುಗಳನ್ನು ಅರಿಯುವುದರ ಜೊತೆ ಜೊತೆಗೆ ಆಕೆಯ ಧೈರ್ಯ ಮತ್ತು ಸಾಮರ್ಥ್ಯಗಳನ್ನು ಮುಕ್ತವಾಗಿ ಶ್ಲಾಘಿಸಬೇಕು, ಆಕೆಯ ಕಷ್ಟದ ಸಮಯದಲ್ಲಿ ಆಕೆಯ ಜೊತೆಗಿದ್ದು ಸಾಂತ್ವನ ಹೇಳಬೇಕು.... ತಂದೆಯ ಈ ನಡವಳಿಕೆ ಮಕ್ಕಳ ಮೇಲೆ ಬೀರುವ ಪರಿಣಾಮ ಅತ್ಯದ್ಭುತ. ಸಾಂಗತ್ಯದ ನಿಜವಾದ ಅರ್ಥವನ್ನು ಮಕ್ಕಳು ಪಾಲಕರ ನಡುವಿನ ಒಡನಾಟದಿಂದ ಅರಿತಾಗ ಅವರು ಕೂಡ ತಮ್ಮ ಬದುಕಿನಲ್ಲಿ ಇದನ್ನು ಪಾಲಿಸುತ್ತಾರೆ. ಪತ್ನಿಯ ಮೇಲೆ ನಿಮ್ಮ ಸಿಟ್ಟು ಸೆಡವುಗಳನ್ನು ಬಹಿರಂಗವಾಗಿ ಪ್ರದರ್ಶಿಸುವ ನಿಮಗೆ ನಿಮ್ಮ ಪ್ರೀತಿಯನ್ನು ಪ್ರದರ್ಶಿಸಲು ಹಿಂಜರಿಕೆ ಏಕೆ? . ನಿಮ್ಮ ಜೀವನದ ಮುನ್ನುಡಿಯಲ್ಲಿ ನಿಮ್ಮ ಪತ್ನಿ ಬರಲಿಕ್ಕಿಲ್ಲ ಎಂಬುದು ಒಪ್ಪತಕ್ಕ ಮಾತು. ಆದರೆ ನಿಮ್ಮ ಯೌವನದ ಕಾಲದಿಂದ ನಿಮ್ಮ/ಆಕೆಯ ಜೀವಿತದ ಅಂತ್ಯ ಕಾಲದವರೆಗೂ ನಿಮ್ಮ ಬದುಕಿನಲ್ಲಿ ಅತ್ಯಂತ ಮಹತ್ವದ ಪಾತ್ರ ನಿಮ್ಮ ಪತ್ನಿಯದು ಎಂಬುದರಲ್ಲಿ ಸಂಶಯವೇ ಇಲ್ಲ. ನಿಮ್ಮ ಕುಟುಂಬದ ಕಥೆಯಲ್ಲಿ ಆಕೆಯ ಪಾತ್ರ ಕಿರಿದಾದರೂ ನಿಮ್ಮ ವೈಯುಕ್ತಿಕ ಬದುಕಿನಲ್ಲಿ ಆಕೆಯೇ ನಾಯಕಿ. ನಿಮ್ಮ ಮಕ್ಕಳ ವ್ಯಕ್ತಿತ್ವವನ್ನು ರೂಪುಗೊಳಿಸುವಲ್ಲಿ ಆಕೆಯೇ ಶಿಲ್ಪಿ ಆದರೂ ಆಕೆಗೆ ನಿಮ್ಮ ಸಹಾಯ, ಸಹಕಾರದ ಅವಶ್ಯಕತೆ ಇದ್ದೇ ಇರುತ್ತದೆ. ನಿಮ್ಮ ಪ್ರೋತ್ಸಾಹ ಮತ್ತು ಶ್ರೀರಕ್ಷೆಗಳು ಆಕೆಯ ಆತ್ಮಸ್ಥೈರ್ಯವನ್ನು ವೃದ್ಧಿಸಿ ಆಕೆಯ ಅಂತಸ್ಸತ್ವವನ್ನು ಹೆಚ್ಚಿಸಿ ಆಕೆಯದ್ದೇ ಮತ್ತಷ್ಟು ಉತ್ತಮ ವರ್ಷನ್ ಆಕೆ ಆಗುವುದರಲ್ಲಿ ಸಂದೇಹವೇ ಇಲ್ಲ.... ಇದು ನಿಮ್ಮ ಕುಟುಂಬದ, ಮಕ್ಕಳ ಸಾಮಾಜಿಕ ಪ್ರಗತಿಗೆ ಅತ್ಯುತ್ತಮ ದಾರಿಯನ್ನು ತೆರೆಯುತ್ತದೆ.

ಹೊಂದಾಣಿಕೆ ಎನ್ನುವುದು ಕೆಲಸದ, ಜವಾಬ್ದಾರಿಗಳ ವಿಭಜನೆ ಅಲ್ಲ... ಹೊಂದಾಣಿಕೆ ಎಂಬುದು ಪರಸ್ಪರ ಕೂತು ಕುಟುಂಬದ ಏಳಿಗೆಗೆ ಯಾವುದು ಅವಶ್ಯಕ ಎಂಬುದರ ಕುರಿತು ಯೋಜಿಸಿ ಅವುಗಳನ್ನು ಬದುಕಿನಲ್ಲಿ ಜಾರಿ ಗೊಳಿಸುವುದು. ಆಕೆಯ ದೈಹಿಕ ಶ್ರಮ, ಮಕ್ಕಳನ್ನು ಪೋಷಿಸುವ ವಿಧಾನ ಮತ್ತು ಆಕೆಯ ಬದ್ಧತೆಗಳನ್ನು ನೀವು ಅರಿಯುವ ಮತ್ತು ಮುಕ್ತವಾಗಿ ಅದನ್ನು ಒಪ್ಪಿ ಗೌರವಿಸಿ, ಪ್ರಶಂಶಿಸಿದಾಗ ಆಕೆ ಇಮ್ಮಡಿ ಉತ್ಸಾಹದಿಂದ ತನ್ನ ಕೆಲಸದಲ್ಲಿ ತೊಡಗಿ ಕೊಳ್ಳುತ್ತಾಳೆ. ಆಫ್ಟರ್ ಆಲ್... ಆಲ್ ಶಿ ವಾಂಟ್ಸ್ ಈಸ್ ರಿಕಗ್ನಿಷನ್ ಫ್ರಮ್ ಹರ್ ಹಸ್ಬೆಂಡ್ ಅಂಡ್ ಚಿಲ್ಡ್ರನ್ ಓನ್ಲಿ..

ನಿಮ್ಮ ಮಕ್ಕಳ ಮೇಲೆ ನಿಮಗಿರುವಷ್ಟೇ ಪ್ರೀತಿ ಅಕ್ಕರೆ ಕಾಳಜಿಗಳು ನಿಮ್ಮ ಪತ್ನಿಯ ಮೇಲೂ ಇರಬೇಕು. ಹೆಂಡತಿ ಮತ್ತು ಮಕ್ಕಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಿಮ್ಮ ಪತ್ನಿಯ ಕುರಿತು ನೀವು ಹೊಂದಿರುವ ಪ್ರೀತಿ, ಕಾಳಜಿ, ಭದ್ರತಾ ಭಾವನೆಗಳ ಪ್ರತಿಫಲನ ನಿಮ್ಮ ಮಕ್ಕಳಲ್ಲಿ ನೀವು ಕಾಣುತ್ತೀರಿ.

ಹೆಣ್ಣು ಮಕ್ಕಳನ್ನು ಅರಿಯಲು ಬಹಳ ಜಾಣ್ಮೆ ಬೇಕಿಲ್ಲ.... ಅಷ್ಟಕ್ಕೂ ಅರಿಯದೆ ಇರಲು ಆಕೆ ಗಣಿತದ ಲೆಕ್ಕವೇನಲ್ಲ. ಆಕೆಗೆ ಬೇಕಾಗಿರುವುದು ತುಸು ಪ್ರೀತಿ, ತನ್ನ ಮೌನದ ಭಾಷೆಯನ್ನು ಕೂಡ ಅರಿಯುವ ತಾಳ್ಮೆಯನ್ನು ಹೊಂದಿರುವ ಪತಿ, ನೋವಿನಲ್ಲಿ ಸಾಂತ್ವನ ನೀಡುವ, ಏನೇ ಬರಲಿ ನಾನು ನಿನ್ನ ಜೊತೆಗಿರುವೆ ಎಂಬ ಭದ್ರತಾ ಭಾವವನ್ನೇ ಹೊರತು ಆಕೆಯುದ್ದ



ನೀವು ಸುರಿಯುವ ಚಿನ್ನದ ಒಡವೆ ವಸ್ತ್ರಗಳಲ್ಲ.

ಆದ್ದರಿಂದ ಪುರುಷರೇ, ನಿಮ್ಮ ಮಕ್ಕಳಿಗೆ ನೀವು ಏನನ್ನಾದರೂ ಕೊಡ ಮಾಡುವುದಾದರೆ ಅದು ನಿಮ್ಮ ಪತ್ನಿಯೊಂದಿಗೆ ನಿಮ್ಮ ಪ್ರೀತಿ ವಿಶ್ವಾಸ ನಂಬಿಕೆಗಳನ್ನು ಹೊಂದಿರುವ ಸುಂದರ ಬಂಧದ ಉಡುಗೊರೆಯನ್ನು, ಪತ್ನಿಯೊಂದಿಗಿನ ನಿಮ್ಮ ಒಳ್ಳೆಯ ನಡವಳಿಕೆಯ ಈ ಉಡುಗೊರೆಯನ್ನು ನಿಮ್ಮ ಮಕ್ಕಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮುಂದಿನ ಜನಾಂಗಕ್ಕೆ ಮಾದರಿಯಾಗಿ ಬಾಳುತ್ತಾರೆ.

ಪ್ರೀತಿ, ಗೌರವ, ನಂಬಿಕೆ ಮತ್ತು ವಿಶ್ವಾಸಗಳ ದಾರಿಯನ್ನು ಆಯ್ದುಕೊಳ್ಳುವ ಮೂಲಕ ನೀವು ಕೇವಲ ಒಳ್ಳೆಯ ತಂದೆ ಮಾತ್ರ ಆಗುವುದಿಲ್ಲ, ಒಳ್ಳೆಯ ಮಾನವೀಯ ಗುಣವುಳ್ಳ ವ್ಯಕ್ತಿಯಾಗುವಿರಿ. ಈ ನಿಟ್ಟಿನಲ್ಲಿ ಪ್ರಯತ್ನಪಟ್ಟರೆ ಯಶಸ್ಸು ಖಂಡಿತ... ಏನಂತೀರಾ ಸ್ನೇಹಿತರೇ?

# ಶಿಕ್ಷಣ ಮತ್ತು ಸ್ಥಳೀಯ ಸಂಸ್ಕೃತಿ

■ ಡಾ.ಪ್ರಸನ್ನ ನಾಡಿಗರ್, ಕೂಡ್ಲಿಗಿ

ಸರ್ವ ಧರ್ಮ ಸಮಭಾವದ ಶಿಕ್ಷಣ ವ್ಯವಸ್ಥೆ ನಮ್ಮದು. ಒಂದೇ ಜಾತಿ... ಒಂದೇ ಧರ್ಮ.. ಒಬ್ಬನೇ ದೇವರು.... ಎಂಬ ಸಂದೇಶದಲ್ಲಿ ಮನುಷ್ಯರ ನಡುವಿನ ಭಿನ್ನತೆಯ ಅಡ್ಡ ಗೋಡೆಗಳನ್ನ ಕೆಡವಿ ಧರ್ಮದ ಮೂಲ ತತ್ವವನ್ನು ಅರಿಯಬೇಕೆಂಬ ಮಹತ್ವವಿದೆ... ಹೀಗೆ ಮಾಡುವುದು ನಿಜವಾದ ಸಂಸ್ಕೃತಿ ಇಂತಹ ಪರಿಷ್ಕಾರ ಓದಬೇಕೆಂದರೆ ಶಿಕ್ಷಣ ಒಂದೇ ದಾರಿ....

ಯಾವುದೇ ಸ್ಥಳದಲ್ಲಿ ವಾಸಿಸುತ್ತಿದ್ದರು ಸ್ಥಳೀಯ ಸಂಸ್ಕೃತಿಯಿಂದ ಹೊರತಾದ ಬದುಕು ಸಾಧ್ಯವಾಗದು. ಶಿಕ್ಷಣ ಸಂಸ್ಕೃತಿಗೂ ಸಂಬಂಧವಿದೆ ಇದು ಭಾಷೆಯ ಮೂಲಕ ನಡೆಯುವ ಅನುಬಂಧ. ತಾನು ಆಡುವ ಭಾಷೆಯಲ್ಲಿ ಶಿಕ್ಷಣ ಪಡೆಯುವ ಮಗುವಿಗೆ ಭಾಷೆಯ ಮೂಲ ದ್ರವ್ಯವೆನಿಸುವ ಸಂಸ್ಕಾರದ ಸ್ಪರ್ಶವೂ ತನ್ನಿಂದ ತಾನೇ ದೊರೆಯುತ್ತದೆ.

ಯಾವುದೇ ಕಾಲದಲ್ಲಿರಲಿ ಶಿಕ್ಷಣ ಮತ್ತು ಸಂಸ್ಕೃತಿಯ ನಡುವೆ ಸಂಬಂಧ ಇದ್ದೆ ಇತ್ತು ಈಗಲೂ ಇದೆ ಇದು ಸದಾಕಾಲವೂ ಇರುವ ಅನಿವಾರ್ಯತೆಯೂ ಹೌದು. ಪ್ರಸ್ತುತ ಶಿಕ್ಷಣವು ಅನ್ನ ಗಳಿಕೆಯ ಸಾಮರ್ಥ್ಯವನ್ನು ಕೊಡದೆ ಇದ್ದಾಗ ನಿರರ್ಥಕ ಎಂದು ಅನಿಸುವುದು. ವರ್ತಮಾನದಲ್ಲಿ ಶಿಕ್ಷಣ ಮತ್ತು ಸಂಸ್ಕೃತಿ ಬೆಳೆದು ಬಂದ ಆದಿಯನ್ನ ಅವಲೋಕಿಸುವುದಾದರೆ, ಗುರುಕುಲದಿಂದ ಆರಂಭಗೊಂಡ ಶಿಕ್ಷಣ ಮತ್ತು ಸಂಸ್ಕೃತಿಯು ಬೌದ್ಧಾಯಗ ಇಸ್ಲಾಮಿ ಯುಗ ಇನ್ನಷ್ಟು ಪರಿವರ್ತನೆ ಶೀಲತೆಯನ್ನು ಕಂಡುಕೊಂಡದ್ದರೂ ಸ್ಥಳೀಯ ಸಂಸ್ಕೃತಿಯ ಅನುಗುಣವಾಗಿ ಶಿಕ್ಷಣ ನಡಿಯುತ್ತಿದೆ.

ತಾಯಿನಾಡನ್ನು ಬಿಟ್ಟು ಇನ್ನೊಂದು ನಾಡಿನಲ್ಲಿ ನೆಲೆಸುವ ಜನ ಸಮೂಹವು ತಮ್ಮ ಭಾಷೆಯನ್ನು ಉಳಿಯ ಕೊಡುವುದರಿಂದಲೂ ಮೂಲ ಸಂಸ್ಕೃತಿಯೆಂದು ಪುನಶ್ಚೇತನ ಗೊಳ್ಳುವ ಸಾಧ್ಯವಿದೆ. ಕಲಿಕೆಯ ಭಾಷೆಯು ಅದೇ. ಅದರಲ್ಲಿ ಇದು ಮತ್ತಷ್ಟು ದೃಢಗೊಳ್ಳುವುದು ಬದುಕಿನ ಸಂಕೀರ್ಣತೆಯೊಳಗೆ. ಪರಸ್ಪರ ಪ್ರೀತಿ... ವಿಶ್ವಾಸ... ಸ್ನೇಹ... ಸಂಬಂಧಗಳು ಎಡೆಯಾಡುತ್ತ ದೈನಂದಿನ ಆಗು ಹೋಗುಗಳಿಗೆ ಸಂವಾದಿಯಾಗುವಂತ ಭಾಷಾ ಸಂಘಟನೆಗಳು ಮಹತ್ವದ ಪಾತ್ರ ವಹಿಸುತ್ತವೆ.



ಪಠ್ಯಪುಸ್ತಕಗಳಲ್ಲಿ ಆಯಾಯ ಧರ್ಮದ ಪರಿಚಯದೊಂದಿಗೆ ಸಾಂಸ್ಕೃತಿಕ ಅರಿವನ್ನು ನೀಡಲಾಗುತ್ತದೆ. ಎಳೆಯ ಮನಸ್ಸುಗಳಲ್ಲಿ.... ಹೊಂದಾಣಿಕೆಯ ಬೀಜ ಬಿತ್ತುವುದೇ ಇದರ ಉದ್ದೇಶ. ಆದರೆ ಕೆಲವೊಮ್ಮೆ ಧರ್ಮದೊಡನೆ ರಾಜಕಾರಣ ರಾಜಕಾರಣದಲ್ಲಿ... ಧರ್ಮ ಮಿಳಿತಗೊಂಡು ಶಿಕ್ಷಣ ಕ್ರಮದ ಮೇಲೆ ಸವಾರಿ ನಡೆಸುವ ವಿಷಮ ಸ್ಥಿತಿ ಒದಗುವುದು. ಇದು ಸ್ಥಳೀಯ ಸಂಸ್ಕೃತಿ ಯೊಂದಿಗೆ ವಿದಿರಿಸಬಲ್ಲದು. ಇಲ್ಲಿ ವಿರೋಧವೆಂದರೆ ದಂಗೆಯಲ್ಲ ಒಟ್ಟಾಗಿ ಬಾಳುವ ಸಂಸ್ಕೃತಿಯನ್ನು ರಕ್ಷಿಸಲು ನಡೆಸುವ ಮೌನ ಹೋರಾಟ ಸತ್ತಿಲ್ಲದೆ ಪ್ರತಿಕ್ರಿಯೆ ತಮ್ಮದೇ ಆಯ್ಕೆಗೆ ಬದ್ಧರಾಗುವುದು ಅವಿಶ್ವಾಸ ಒತ್ತು ಪಡಿಸುವುದು. ಇವೆಲ್ಲ ಸಾಮೂಹಿಕ ನೆಲೆಯಲ್ಲಿ ಒಂದು ವಿಶಿಷ್ಟ ಸಂಸ್ಕೃತಿಯನ್ನು ಕಾಪಾಡಲು ನೆರವಾಗುವ ಸಂಗತಿಗಳು. ಭಾಷೆ ಜಾತಿ ಧರ್ಮಗಳೆಂದು ವಿಂಗಡಿಸಿಕೊಂಡು ಹೋರಾಡುವವರ ನಡುವೆ ಯಾವ ಸಂಸ್ಕೃತಿಯು ಬಾಳುವುದು...? ಸಾಧ್ಯವಿಲ್ಲ!

ಶೋಷಣೆಗೆ ಒಳಗಾಗುವ.. ಗುಲಾಮಗಿರಿ ಯಿಂದ ಮುಕ್ತಗೊಳ್ಳಲು ಇದೇ ಕೈ ದಿವಿಗೆ. ಆದ್ದರಿಂದ ಸ್ಥಳೀಯ ಸಂಸ್ಕೃತಿ ಎಂದರೆ ಕೇವಲ ಆಚರಣೆಗೆ ಸಂಬಂಧಿಸಿದಲ್ಲ. ಹಬ್ಬಗಳಲ್ಲಿ ಉಣ್ಣುಟ್ಟು ಸುಖಪಡುವುದು ಸಂಸ್ಕೃತಿಯಲ್ಲ. ಇತರ ಆಚಾರ ವಿಚಾರಗಳನ್ನು ಮೈದುಂಬಿಸಿಕೊಂಡು ಹೊಸ ಜನಾಂಗವನ್ನು ಸೃಷ್ಟಿಸುವುದು ಸಂಸ್ಕೃತಿಯಲ್ಲ.ತನ್ನತನವನ್ನು ಮರೆಯದೆ ಸಂಕುಚಿತ ಭಾವನೆಗಳನ್ನು ಬದಿಗೊತ್ತಿ ಎಲ್ಲರೊಳಗೊಂದಾಗಿ ಬದುಕುವುದನ್ನು ರೂಪಿಸುವುದೇ ಸುಸಂಸ್ಕೃತನ ಲಕ್ಷಣ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 25 ದಿನ

https://epaper.hampitimes.com

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಕನ್ನಡ

### ಭಗತ್ ಸಿಂಗ್

**1. ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?**
ಉತ್ತರ:– ಜಲಿಯನ್ ವಾಲಾಬಾಗ್‌ನಲ್ಲಿ ಶಾಂತಿಯುತ ಸಭೆ 1919ರ ಏಪ್ರಿಲ್ 13 ರಂದು ನಡೆಯಿತು.

**2. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರೇನು?**
ಉತ್ತರ:– ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆಗರೆದ ಅಧಿಕಾರಿಯ ಹೆಸರು ಜನರಲ್ ಡಯರ್

**3. ಭಗತ್‌ಸಿಂಗ್‌ನ ತಂದೆ ತಾಯಿಯ ಹೆಸರೇನು?**
ಉತ್ತರ:– ಭಗತ್‌ಸಿಂಗ್‌ನ ತಂದೆ ಕಿಶನ್ ಸಿಂಗ್, ತಾಯಿ ವಿದ್ಯಾವತಿ.

**4. ಭಗತ್‌ಸಿಂಗ್ ಯಾವುದನ್ನು ಪಾರಿತೋಷಕವೆಂದು ತಿಳಿದಿದ್ದನು?**
ಉತ್ತರ:– ಭಗತ್‌ಸಿಂಗ್ ರಕ್ತಸಿಕ್ತವಾಗಿದ್ದ ಮಣ್ಣನ್ನು ಪಾರಿತೋಷಕವೆಂದು ತಿಳಿದಿದ್ದನು.

**5. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ ಹೇಳಿದ್ದೇನು?**
ಉತ್ತರ:– ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಹತ್ಯಾಕಾಂಡದ ಮಣ್ಣಿನ ಕುರಿತು ತಂಗಿಗೆ 'ಇದು ಬಹಳ ಪೂಜ್ಯನೀಯವಾದ ಮಣ್ಣು, ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ' ಎಂದು ಮಣ್ಣನ್ನು ತೋರಿಸುತ್ತಾ ಹೇಳಿದನು.

**6. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**
ಉತ್ತರ:– ಜಲಿಯನ್ ವಾಲಾಬಾಗ್‌ನ ಮಾರಣ ಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತ್ತು. 1921ರಲ್ಲಿ ಒಂದು ನಿರ್ಧಾರಕ್ಕೆ ಬಂದ ಭಗತ್‌ಸಿಂಗ್, ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನಾದರೂ ಮಾಡಿಯೇ ತೀರುತ್ತೇನೆಂದು ನಿರ್ಧರಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ.

**7. ರಕ್ತಸಿಕ್ತವಾಗಿದ್ದ ಮಣ್ಣನ್ನು ಭಗತ್‌ಸಿಂಗ್ ಹೇಗೆ ಜೋಪಾನ ಮಾಡಿದನು?**
ಉತ್ತರ:– ಪವಿತ್ರವಾದ ರಕ್ತಸಿಕ್ತವಾಗಿದ್ದ ಮಣ್ಣಿನಿಂದ ತುಂಬಿದ ಡಬ್ಬಿಯನ್ನು ಮನೆಯ ಸ್ವಚ್ಛವಾದ ಜಾಗದಲ್ಲಿ ಇರಿಸಿದ. ಹೂಗಳನ್ನು ಅದರ ಮೇಲಿಟ್ಟು ಭಕ್ತಿಯಿಂದ ನಮಸ್ಕರಿಸಿದ. ಅಂದಿನಿಂದ ಅನೇಕ ವರ್ಷಗಳವರೆಗೆ ಆ ಮಣ್ಣನ್ನು ಪೂಜಿಸುವುದು ಅವನ ದಿನನಿತ್ಯವಾದ ಆಚರಣೆಯಾಯಿತು.

**8. ಜಲಿಯನ್ ವಾಲಾಬಾಗ್‌ನಲ್ಲಿ ಬಾಲಕ ಭಗತ್‌ಸಿಂಗ್ ಏನು ಮಾಡಿದ?**
ಉತ್ತರ:– ಪೋಲಿಸರ ಕಣ್ತಪ್ಪಿಸಿ ಜಲಿಯನ್ ವಾಲಾಬಾಗ್ ಬಂದ ಬಾಲಕ ಭಗತ್‌ಸಿಂಗ್ ಭಕ್ತಿಯಿಂದ ತಲೆಬಾಗಿ, ರಕ್ತದಿಂದ ತೊಯ್ದ ಒಂದು ಚಿಟಿಕೆ ಮಣ್ಣನ್ನು ತೆಗೆದು ಹಣೆಗೆ ತಿಲಕವನ್ನಿಟ್ಟುಕೊಂಡು, ಕಣ್ಮುಚ್ಚಿ ಭಕ್ತಿಯಿಂದ ಕೈ ಮುಗಿದು ಹುತಾತ್ಮರಿಗೆ ಗೌರವ ಸಲ್ಲಿಸಿ, ಪೂಜ್ಯನೀಯ ಆ ಮಣ್ಣನ್ನು ಊಟದ ಡಬ್ಬಿಯಲ್ಲಿ ಮನೆಗೆ ತಂದನು.

**9. ಭಗತ್‌ಸಿಂಗ್ ಹೇಗೆ ಅಮರನಾದನು ?**
ಉತ್ತರ:– ಭಗತ್‌ಸಿಂಗ್ ಕ್ರಾಂತಿಕಾರಿಗಳ ಸಹಕಾರದಿಂದ ಮಾತೃಭೂಮಿಯನ್ನು ಗುಲಾಮಗಿರಿಯ ಸಂಕೋಲೆಯಿಂದ ಬಿಡಿಸಲು ನಿರ್ಧರಿಸಿದನು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಇಂಕ್ವಿಲಾಬ್ ಜಿಂದಾಬಾದ್ ಘೋಷಣೆಯೊಂದಿಗೆ ಹೋರಾಟಕ್ಕೇ ಒಂದು ಗುರಿಯನ್ನು ತೋರಿಸಿಕೊಟ್ಟು, ಮರಣದಂಡನೆ ಶಿಕ್ಷೆಗೆ ಗುರಿಯದನು.

### ನಾನು ಪ್ರಾಸ ಬಿಟ್ಟ ಕತೆ

**1. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**
ಉತ್ತರ:– ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಾರೆ, ಮತ್ತೊಂ ದು ಕಡೆ ಮಂಡಿಗೆಗಳನ್ನು ಮಡುಚುತ್ತಾರೆ, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಾರೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರವೆಲ್ಲಾ ಗದ್ದಲ.

**2. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?**
ಉತ್ತರ:– ಏನು ತೋಚಿತೊ ದೇವರೇ ಬಲ್ಲ. ಮತ್ತೆ ಚಪ್ಪರದ ಗವುಜು ನನಗೆ ಕೇಳಿಸಲಿಲ್ಲ. ನೆಟ್ಟಗೆ ಹೋದೆ, ಅಭ್ಯಾಸದ ಪುಸ್ತಕವನ್ನು ಹಿಡಿದೆ, ಬರೆಯತೊಡಗಿದೆ. ಇಂದಿನ ಮಾತಿನಲ್ಲಿ ಏಕಾಂಕ ನಾಟಕ ಎನ್ನಬಹುದಾದ ಒಂದು ನಾಟಕವನ್ನು ಇಳಿಹೊತ್ತಿನೊಳಗೆ ಬರೆದು ಮುಗಿಸಿದೆ.

**3. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?**
ಉತ್ತರ:– ಹೆಸರು ಮಕರಾಕ್ಷನ ಕಾಳಗ.

**4. ಬಾಸೆಲ್ ಮಿಶನ್‌ನವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?**
ಉತ್ತರ:– 'ಹಳಗನ್ನಡ ವ್ಯಾಕರಣ ಸೂತ್ರಗಳು'

**5. "ಬಿಲ್ಲ ಹಬ್ಬ"ವನ್ನು ರಚಿಸಿದ ಕವಿ ಯಾರು?**
ಉತ್ತರ:– ವಾಸುದೇವ ಪ್ರಭು ಎಂಬವರು 'ಬಿಲ್ಲ ಹಬ್ಬ'ವನ್ನು ರಚಿಸಿದರು.

**6. ಮುದ್ದಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?**
ಉತ್ತರ:– 1899ರಲ್ಲಿ ಶೇಕ್‌ಸ್ಪೀಯರ್ "ಟ್ವೆಲ್ಫ್‌ನೈಟ್" ಎಂಬ ನಾಟಕದ ಮೊದನೆಯ ಅಂಕದಿಂದ ಕೆಲವು ನೋಟಗಳನ್ನು ವೃತ್ತ ಕಂದಗಳಲ್ಲಿ ಕನ್ನಡಿಸಿ, ಅವನ್ನು ಶ್ರೀನಂದಳಿಕೆ ಲಕ್ಷ್ಮೀನಾರಣಪ್ಪ(ಮುದ್ದಣ)ನವರಿಗೆ ಉಡುಪಿಗೆ ಕಳಿಸಿಕೊಟ್ಟೆ. ಮುಂದರಿಸು ಎಂದು ಅವರು ಹೇಳಿಕಳಿಸಿದರು.

**7. ಪ್ರಾಸ ಬಿಡಬೇಕೆಂದು ನಿರ್ಧರಿಸಿದ ಬಳಿಕ ಪೈಗಳು ಯಾವ ಕೃತಿಯನ್ನು ಬರೆದರು?**
ಉತ್ತರ:– ಗಿಳಿವಿಂಡು

**8. ಗೋವಿಂದ ಪೈರವರ ಕವಿತೆಗಳು ಮೊದಲಿಗೆ ಅಚ್ಚಾದುದು ಯಾರ ಪತ್ರಿಕೆಯಲ್ಲಿ?**
ಉತ್ತರ:– ಗೋವಿಂದ ಪೈ ರವರ ಕವಿತೆಗಳು ಮೊದಲಿಗೆ ಸುವಾಸಿನಿ ಎಂಬ ಮಾಸಪತ್ರಿಕೆಯಲ್ಲಿ ಅಚ್ಚಾದವು.

**9. ಮಹಮದ್ ಇಕ್ಬಾಲರ ಯಾವ ಕವಿತೆಯಯನ್ನು ಗೋವಿಂದ ಪೈರವರು ಕನ್ನಡೀಕರಿಸಿದರು?**
ಉತ್ತರ:–– ಮಹಮ್ಮದ್ ಇಕ್ಬಾಲರ 'ಹಿಂದೂಸ್ತಾನ ಹಮಾರ' ಎಂಬ ಗೀತೆಯನ್ನು ಕನ್ನಡೀಕರಿಸಿದರು.

**10. ಪ್ರಾಸರಹಿತವಾದ ಕವಿತೆಗಳು ಮೊದಲ ಬಾರಿಗೆ ಯಾವ ಪತ್ರಿಕೆಯಲ್ಲಿ ಪ್ರಕಟವಾದವು?**
ಉತ್ತರ:– ಪ್ರಾಸರಹಿತವಾದ ಕವಿತೆಗಳು ಮೊದಲ ಬಾರಿಗೆ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟವಾದವು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ಮೈಕ್ರೋ ನ್ಯೂಸ್

## ಮಾರ್ಚ್ 13 ರಿಂದ 15 ವರೆಗೆ ವಿಜಯನಗರದಲ್ಲಿ ಉಪಲೋಕಾಯುಕ್ತರ ಪ್ರವಾಸ

■ ಹಂಪಿ ಟೈಮ್ಸ್ ಹೊಸಪೇಟೆ

ಉಪಲೋಕಾಯುಕ್ತರಾದ ಬಿ.ಬೀರಪ್ಪ ಅವರು ಮಾರ್ಚ್ 13 ರಿಂದ 15 ರವರೆಗೆ ವಿಜಯನಗರ ಪ್ರವಾಸ ಕೈಗೊಳ್ಳುವರು. ಮಾ.14 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ಹೊಸಪೇಟೆ ನಗರದ ಡ್ಯಾಂ ರಸ್ತೆ, ನೆಹರು ಕಾಲೋನಿ, ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನದ ಎದುರು ಇರುವ ಸಹಕಾರಿ ಕಲ್ಯಾಣ ಮಂಟಪದಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ ಹಾಗೂ ವಿಚಾರಣೆ ನಡೆಸುವರು.

ಜಿಲ್ಲೆಯಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿ, ನೌಕರರಿಂದ ಕಾನೂನು ರೀತ್ಯಾ ಆಗಬೇಕಾದ ಕೆಲಸದಲ್ಲಿ ವಿಳಂಬ ಆಗಿದ್ದರೆ ಅಥವಾ ಅಧಿಕಾರಿ, ನೌಕರರು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುವುದು ಅಥವಾ ಇನ್ನಾವುದೇ ತರಹದ ಭ್ರಷ್ಟಾಚಾರ ಮತ್ತು ದುರಾಡಳಿತದಲ್ಲಿ ತೊಡಗಿದ್ದರೆ ಸಾರ್ವಜನಿಕರು ಉಪಲೋಕಾಯುಕ್ತರ ಮುಂದೆ ತಮ್ಮ ದೂರುಗಳನ್ನು ಲಿಖಿತ ರೂಪದ ಮುಖಾಂತರ ಸಲ್ಲಿಸಬಹುದಾಗಿದೆ.

ಮಾರ್ಚ್ 15 ರಂದು ಇದೇ ಸಹಕಾರಿ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15ರ ವರೆಗೆ ಮತ್ತು ಮಧ್ಯಾಹ್ನ 2:30 ರಿಂದ ಸಂಜೆ 5 ರವರಗೆ ವಿಜಯನಗರ ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಗೌರವಾನ್ವಿತ ಉಪಲೋಕಾಯುಕ್ತರ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರಕರಣಗಳಲ್ಲಿ ತನಿಖೆ ಹಾಗೂ ವಿಚಾರಣೆಗೆ ಬಾಕಿಯಿರುವ ಪ್ರಕರಣಗಳಲ್ಲಿ ಈ ಕಚೇರಿಯಿಂದ ನೋಟಿಸ್ ಕಳುಹಿಸಿರುವ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸುತ್ತಾರೆ. ದೂರುದಾರರು ಮತ್ತು ಎದುರುದಾರರು, ನಿಗದಿತ ಸಮಯದಲ್ಲಿ ಹಾಜರಿದ್ದು ಇತ್ಯರ್ಥ ಮಾಡಿಕೊಳ್ಳಲು ತಿಳಿಸಲಾಗಿದೆ.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

ತೋಟಗಾರಿಕೆ ಇಲಾಖೆಯ ವಿಶೇಷ ಕಾರ್ಯಕ್ರಮ। ವಿವಿಧ ಹಣ್ಣುಗಳ, ಅಣಬೆ, ಜೇನು ಪ್ರದರ್ಶನ ಮತ್ತು ಮಾರಾಟ

# 1 ಕೆಜಿ ರೂಬಿ ರೋಮನ್ ದ್ರಾಕ್ಷಿಗೆ 8 ಲಕ್ಷ ರೂ

## ಕೊಪ್ಪಳದಲ್ಲಿ ಮಹಾ ಶಿವರಾತ್ರಿ ನಿಮಿತ್ತ ಫಲ ಪ್ರದರ್ಶನ। ಹಣ್ಣು ಮತ್ತು ಜೇನು ಮೇಳ

■ ಹಂಪಿ ಟೈಮ್ಸ್ ಕೊಪ್ಪಳ

ರೈತರಿಂದ ನೇರವಾಗಿ ಗ್ರಾಹಕರಿಗೆ, ರೈತರಿಂದ ಖರೀದಿಸಿ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೊಪಳ ತೋಟಗಾರಿಕೆ ಇಲಾಖೆಯಿಂದ ಮಹಾ ಶಿವರಾತ್ರಿ ಪ್ರಯುಕ್ತ ಫೆಬ್ರವರಿ 23 ರಿಂದ ಫೆ. 27 ರವರೆಗೆ ನಗರದ ತೋಟಗಾರಿಕೆ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾದ “ದ್ರಾಕ್ಷಿ, ದಾಳಿಂಬೆ, ಪೇರಲ, ಅಂಜೂರ, ಕಲ್ಲಂಗಡಿ, ಕರಬೂಜ, ಬಾಳೆ, ಪಪ್ಪಾಯ, ಹಲಸು, ಅಣಬೆ ಹಾಗೂ ಜೇನು” ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಅವರು ಭಾನುವಾರ ಚಾಲನೆ ನೀಡಿದರು.



ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ.ಸಿ ಉಕ್ಕುಂದ ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಜೆ.ಶಂಕ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ತೋಟಗಾರಿಕೆ ಬೆಳೆಗಾರರು, ರೈತರು ಹಾಗೂ ತೋಟಗಾರಿಕೆ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

**ಹಣ್ಣು ಮತ್ತು ಜೇನು ಮೇಳದ ವಿಶೇಷತೆ:** ಈ ವರ್ಷದ ಮಹಾಶಿವರಾತ್ರಿ ಪ್ರಯುಕ್ತ ಕಲ್ಯಾಣ ಕರ್ನಾಟಕದ ಹಣ್ಣಿನಕಣಜ ಎಂದೇ ಖ್ಯಾತಿ ಪಡೆದ ಕೊಪ್ಪಳ ಜಿಲ್ಲೆಯ ಹಣ್ಣು ಬೆಳೆಗಾರರಿಗೆ ಹಾಗೂ ಎಲ್ಲಾ ಹಣ್ಣುಗಳನ್ನು ಸವಿಯುವ ಗ್ರಾಹಕರಿಗೆ 8ನೇ ವರ್ಷದ ಹಣ್ಣು ಮತ್ತು ಜೇನು ಮೇಳವನ್ನು 5 ದಿನಗಳ ಕಾಲ ತೋಟಗಾರಿಕೆ ಇಲಾಖೆಯಿಂದ ಏರ್ಪಡಿಸಲಾಗಿದ್ದು, ಫೆಬ್ರವರಿ 27ರ ವರೆಗೆ ದ್ರಾಕ್ಷಿ, ದಾಳಿಂಬೆ, ಪೇರಲ, ಅಂಜೂರ, ಕಲ್ಲಂಗಡಿ, ಬಾಳೆ, ಪಪ್ಪಾಯ, ಹಲಸು, ಅಣಬೆ ಮತ್ತುಜೇನು ಮೇಳವು ನಡೆಯಲಿದೆ.

ಕೊಪ್ಪಳ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಬೇಸಿಗೆ ಹಂಗಾಮಿನಲ್ಲಿ ಮಹಾಶಿವರಾತ್ರಿ ಹಬ್ಬಕ್ಕೆ ಲಭ್ಯವಿರುವ ವಿವಿಧ ಬಗೆಯ ಹತ್ತಾರು ಹಣ್ಣುಗಳ ವಿವಿಧ ತಳಿಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಈ ಮಹಾಮೇಳವನ್ನು ಆಯೋಜಿಸಲಾಗಿದೆ.

**ಜಗತ್ತಿನ ಅತ್ಯಂತ ದುಬಾರಿಯ ರೂಬಿ ರೋಮನ್ ಹಣ್ಣಿನ ಪ್ರದರ್ಶನ:** ಈ ಮೇಳದ ಪ್ರದರ್ಶನದಲ್ಲಿ ಮುಖ್ಯ ಆಕರ್ಷಣೆ ಜಪಾನಿನಲ್ಲಿ ಬೆಳೆಯುವ ಜಗತ್ತಿನ ಅತ್ಯಂತ ದುಬಾರಿ ದ್ರಾಕ್ಷಿ ಹಣ್ಣು, ಪ್ರತ್ರಿ ಕೆ.ಜಿ.ಗೆ ರೂ. 8 ಲಕ್ಷ ಮೌಲ್ಯದ ರೂಬಿ ರೋಮನ್‌ದ್ರಾಕ್ಷಿ ಹಣ್ಣನ್ನು ಪ್ರದರ್ಶನದಲ್ಲಿ ಇಡಲಾಗಿದೆ. ಇದರೊಂದಿಗೆ ವಿವಿಧ ವಿದೇಶಿ ಹಣ್ಣಿನ ತಳಿಗಳಾದ ಅವಕಾಡೋಪ್ಲಮ್, ಪೀಚ್, ಲಿಚ್ಚಿ, ರೆಡ್‌ಗ್ಲೋಬ್, ಕಿವಿ ಫ್ರೂಟ್, ರಾಮಭೂತಾನ, ಮ್ಯಾಂಗೋಸ್ಟೀನ್, ಜಪಾನ ಮ್ಯಾಂಗೂ, ಐಸ್‌ಗಾವಾ, ಅಮೇರಿಕನ್ ಆಪಲ್, ಗ್ರೀನ್ ಆಪಲ್, ವಿದೇಶಿ ಪ್ಯಾಷನ್ ಫ್ರೂಟ್, ವೈನ್‌ಗ್ರೇಪ್ ಮುಂತಾದವುಗಳನ್ನು ಹಾಗೂ ಸ್ವದೇಶಿ ಹಾಗೂ ಜಿಲ್ಲೇಯರೈತರು ಬೆಳೆದ ಪ್ಪಪಾಯ, ದ್ರಾಕ್ಷಿ, ಕಲ್ಲಂಗಡಿ, ಪರಲ, ಅಂಜೂರ, ಪಪ್ಪಾಯ, ಹಲಸು, ಬಾಳೆ, ಸಪೋಟ, ಅಣಬೆ, ಜೇನು ಅಲ್ಲದೇ ಅದಕ್ಕೆ ಪೂರಕವಾದ ‘ಜೇನಿನ ಉಪ ಉತ್ಪನ್ನಗಳು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳು ಪ್ರದರ್ಶನದಲ್ಲಿ ಇಡಲಾಗಿದೆ.

ಈ ಎಲ್ಲಾ ಹಣ್ಣುಗಳನ್ನು ಹಾಗೂ ಈ ಹಣ್ಣುಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಜ್ಯೂಸ್, ಜಾಮ್, ಜೆಲ್ಲಿ, ಪುಡಿ, ಸೋಪ, ಇತ್ಯಾಧಿಗಳನ್ನು ಗ್ರಾಹಕರ ಆರೋಗ್ಯ ವೃದ್ಧಿ ದೃಷ್ಟಿಯಿಂದ ಮಾರಾಟ ಮಾಡಲಾಗುತ್ತಿದೆ. ಮೇಳದಲ್ಲಿ ರೈತರಿಗಾಗಿ ಉಚಿತವಾಗಿ ಸ್ಟಾಲ್‌ಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಾಗಿ ಆಯೋಜಿಸಲಾಗಿದ್ದು,30ಕ್ಕೂಹೆಚ್ಚುಹಣ್ಣುಬೆಳೆಗಾರರು, 15 ರೈತ ಉತ್ಪಾದಕ ಕಂಪನಿಗಳಲ್ಲದೇ ಜಿಲ್ಲಾ ಹಾಪಕಾಮ್ಸ್ ಸಂಸ್ಥೆಗಳಿಗೆ ಕೂಡಾ ಸ್ಟಾಲ್‌ಗಳ ವ್ಯವಸ್ಥೆ ಮಾಡಲಾಗಿದೆ. ರೈತ ಉತ್ಪಾದಕ ಕಂಪನಿಗಳು ಹಾಗೂ ಜಿಲ್ಲಾ ಹಾಪಕಾಮ್ಸ್ ಕೊಪ್ಪಳ ನೂರಾರು ಸದಸ್ಯ ರೈತರಿಂದ ವಿವಿಧ ಹಣ್ಣುಗಳನ್ನು ಖರೀದಿಸಿ ಈ ಮೇಳದಲ್ಲಿ ಮಾರಾಟ ಮಾಡುವುದರಿಂದ ಈ ಮೇಳದಲ್ಲಿ ನೇರವಾಗಿ ಭಾಗವಹಿಸಿದ ರೈತರಿಗೂ ಅನುಕೂಲವಾಗಿ ಯೋಗ್ಯ ಬೆಲೆ ಸಿಗುವಂತಾಗಿದೆ.

ಈ ವರ್ಷದ ಮೇಳದ ವಿಶೇಷವೆಂದರೇ ಬಾಕ್ಸ್ ಪ್ಯಾಕಿಂಗ್ ಮಾಡಿ ಗ್ರಾಹಕರಿಗೆ ಪೂರೈಸುತ್ತಿರುವುದು. ಇದರಿಂದಾಗಿ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ಸರ್ವ ಹಣ್ಣು ಬೆಳೆಗಾರರಿಗೆ ಮೇಳದಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸದಂತಾಗಿದೆ. ಮೇಳದಲ್ಲಿ ಗ್ರಾಹಕರಿಗಾಗಿ ವಿಶೇಷ ಆಕರ್ಷಣೆಗೆಂದು ಹಣ್ಣುಗಳಿಂದ ಅಲಂಕೃತವಾದ ಸೆಲ್ಫಿ ಪಾಂಯಿಂಟ್‌ನ್ನುಕೂಡಾ ಆಯೋಜಿಸಲಾಗಿದ್ದು, ಗ್ರಾಹಕರು ಇದರ ಪ್ರಯೋಜನ ಪಡೆಯಬಹುದಾಗಿದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿರೈತರಿಗೆ ಸಬ್ಸಿಡಿದರದಲ್ಲಿ ಹಣ್ಣುಗಳನ್ನು ಪ್ಯಾಕ ಮಾಡಿ ಸರಬರಾಜು ಮಾಡಲು ಆಕರ್ಷಿಣೀಯವಾದ ರಟ್ಟಿನ ಡಬ್ಬಿಗಳನ್ನು ವಿತರಿಸಲಾಗುತ್ತಿದೆ. ಇವುಗಳ ಮೇಲೆ ರೈತರ ಹೆಸರು, ಹಣ್ಣುಗಳು ಅವುಗಳ ವಿವಿಧತಳಿ, ಅಲ್ಲದೇ ದರವನ್ನು ಕೂಡಾ ಮುದ್ರಿಸಿದ್ದು, ರೈತರಿಗೂ, ಗ್ರಾಹಕರಿಗೂ ಇದು ಅತ್ಯಂತ ಪ್ರಯೋಜನಕಾರಿಯಾಗಲಿದೆ. ಅಲ್ಲದೇ ಕೊಪ್ಪಳ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಎಲ್ಲಾ ಹಣ್ಣುಗಳ ಹಾಗೂ ರೈತರ ಹೆಸರು ಕೂಡ ದೂರದೂರಕ್ಕೆ ಪಸರಿಸಿದಂತಾಗುತ್ತದೆ. ಹೀಗಾಗಿ ಮಾರುಕಟ್ಟೆ ಒದಗಿಸಿದಂತಾಗುತ್ತದೆ.

ಈ ಮೇಳದಲ್ಲಿ ವಿವಿಧ ಜೇನಿನ ತುಪ್ಪಗಳು ಹಾಗೂ ಜೇನಿನ ಪರಿಕರಗಳಾದ ಜೇನಿನ ಮೇಣದ ಲಿಪ್‌ಬಾಂಬ್, ಜೇನಿನಲ್ಲಿ ನೇನಸಿದ ಕಾಡುನೆಲ್ಲಿ ಹಾಗೂ ವಿವಿಧ ಆರ್ಯುವೇದ ಗಿಡಮೂಲಿಕೆಗಳನ್ನು ಸೇರಿಸಿ ತಯಾರಿಸಿದ ವಿವಿಧ ಬಗೇಯಜೇನಿನ ತುಪ್ಪಗಳು ಸಹ ಮಾರಾಟಕಕ್ಕೆ ಲಭ್ಯವಿದೆ. ಹಲಸಿನ ಹಣ್ಣಿನಿಂದ ತಯಾರಿಸಿದ ಹಪ್ಪಳ, ಹಲಸಿನ ಪುಡಿ, ಹಲಸಿನ ಚಿಪ್ಸ, ಹಲಸಿ ಮುಂತಾದ ಪರಿಕರಗಳು ಲಭ್ಯವಿರುತ್ತದೆ. ಹಾಗೂ ತಾಜಾ ಅಣಬೆ, ಒಣಗಿಸಿದ ಅಣಬೆ, ಅಣಬೆ ಉಪ್ಪಿನಕಾಯಿ, ಅಣಬೆ ಪುಡಿ ಹಾಗೂ ಅಣಬೆ ಬಿಸ್‌ಕೇಟ್‌ಗಳು ಸಹ ಮೇಳದಲ್ಲಿ ಲಭ್ಯವಿರುತ್ತದೆ. ಹಾಗೂ ಗೂಡಂಬಿ, ಒಣ ದ್ರಾಕ್ಷಿ ಸಹ ಲಭ್ಯವಿರುತ್ತದೆ.

ಇದಲ್ಲದೇ ಎಲ್ಲಾ ಹಣ್ಣುಗಳಲ್ಲಿ ಲಭ್ಯವಿರುವ ಪೋಷಕಾಂಶಗಳು, ಖನಿಜಗಳು ಮತ್ತು ಅವುಗಳ ಆರೋಗ್ಯದ ಬಗ್ಗೆ ಮಹತ್ವ ತಿಳಿಸುವ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗುತ್ತಿದ್ದು, ಗ್ರಾಹಕರಿಗೆ ಇದೊಂದು ವಿಶಿಷ್ಟ ಅನುಭವ ನೀಡಬಲ್ಲದಾಗಿದೆ. "ಎಲ್ಲಾ ಹಣ್ಣುಗಳನ್ನು ಸೇವಿಸಿ ಜೇನು ಸವಿದು ಆರೋಗ್ಯ ಭಾಗ್ಯ ಪಡೆಯಿರಿ" ಎಂಬುದೇ ಈ ಮೇಳದ ದ್ಯೇಯವಾಗಿದೆ. 5 ದಿನಗಳ ಕಾಲ ನಡೆಯುವ ಹಣ್ಣು ಮತ್ತು ಜೇನು ಮೇಳದಲ್ಲಿ ಭಾಗವಹಿಸಿ, ತಾಜಾ ಹಣ್ಣುಗಳನ್ನು ರೈತರಿಂದ ಖರಿದೀಸಿ, ರೈತರನ್ನು ಪ್ರತ್ಸಾಹಿಸಬೇಂಕೆದು ಎಲ್ಲಾ ಗ್ರಾಹಕರಲ್ಲಿ ಕೊಪ್ಪಳ ತೋಟಗಾರಿಕೆ ಇಲಾಖೆಯು ಮನವಿ ಮಾಡಿದೆ.

10ನೇ ತರಗತಿ ಶೈಕ್ಷಣಿಕ ಜೀವನದಲ್ಲಿ ನಿರ್ಣಾಯಕ ಹಂತ. ಈ ಹಂತದಲ್ಲಿ ಪೋಷಕರು ಮಕ್ಕಳ ವಿದ್ಯಾಭ್ಯಾಸದತ್ತ ಗಮನಹರಿಸಬೇಕು ಮತ್ತು ಅವರಿಗೆ ಸಮರ್ಪಕವಾಗಿ ಮಾರ್ಗದರ್ಶನ ಮಾಡಬೇಕು. ಹಂಪಿ ಟೈಮ್ಸ್ ಬಳಗದಿಂದ ಪಾಲಕರಿಗೆ ಕೆಲ ಅತ್ಯುತ್ತಮ ಸಲಹೆಗಳು

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಪಾಲಕರ ಪಾತ್ರ

## ಈ ಬಾರಿಯ ಫಲಿತಾಂಶ ನಮ್ಮದೆ। ಶಿಕ್ಷಕರ ಪರಿಶ್ರಮಕ್ಕೆ ಪಾಲಕರು ಕೈಜೋಡಿಸಿದ್ರೆ ವಿದ್ಯಾರ್ಥಿಗಳು ಪಾಸ್

**1. ಮಕ್ಕಳಿಗೆ ಪ್ರೋತ್ಸಾಹ ನೀಡಿ, ಅವರ ಪ್ರಯತ್ನ ಶ್ಲಾಘಿಸಿ**
ಮಕ್ಕಳ ಪ್ರಗತಿಯಲ್ಲಿ ಆಸಕ್ತಿ ತೋರಿಸಿ, ಅವರ ಪ್ರಯತ್ನವನ್ನು ಶ್ಲಾಘಿಸಿ. ಒತ್ತಡವಿಲ್ಲದ ಪರಿಸರವನ್ನು ಸೃಷ್ಟಿಸಿ, ಶಿಸ್ತು ಕಾಪಾಡಲು ಪ್ರೇರೇಪಿಸಿ.

**2. ಅಧ್ಯಯನ ವೇಳಾಪಟ್ಟಿ ರೂಪಿಸಲು ಸಹಕರಿಸಿ**
ಮಕ್ಕಳಿಗೆ ಸಮಯದ ಮಾರ್ಗಸೂಚಿ ಕೊಟ್ಟು, ದಿನದ ಪಾಠ, ಪುನರಾವಲೋಕನ (Revision), ವಿಶ್ರಾಂತಿ ಮತ್ತು ವಿಹಾರಕ್ಕೆ ಸಮಾನ ಪ್ರಮಾಣದ ಸಮಯವನ್ನು ಪ್ಲಾನ್ ಮಾಡಿ.

**3. ಪಠ್ಯಾತೀತ ಚಟುವಟಿಕೆಗಳನ್ನು ನಿಯಂತ್ರಿಸಿ**
ಮೊಬೈಲ್ ಫೋನ್, ಟಿವಿ, ಅಥವಾ ಗೇಮಿಂಗ್ ನಲ್ಲಿ ಸಮಯ ವ್ಯಯವನ್ನು ಕಟ್ಟಿ ಹಾಕಿ. ಅಂತರ್ಜಾಲವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಬಳಸಲು ಪ್ರೋತ್ಸಾಹಿಸಿ.

**4. ಮಕ್ಕಳೊಂದಿಗೆ ಮಾತುಕತೆ ಮುಕ್ತವಾಗಿರಲಿ**
ಮಕ್ಕಳ ಭಾವನೆಗಳು, ಆತಂಕಗಳು, ಅಥವಾ ಸಮಸ್ಯೆಗಳನ್ನು ತಿಳಿಯಲು ಸಮಯ ಕಳೆಯಿರಿ. ಏಕಪಕ್ಷೀಯ ಸಲಹೆ ಕೊಡುವ ಬದಲಿಗೆ, ಮಕ್ಕಳ ಅಭಿಪ್ರಾಯವನ್ನೂ ಕೇಳಿ.

**5. ಪಠ್ಯಪೂರ್ವಕ ಪ್ರಗತಿಗೆ ಪ್ರಾಮುಖ್ಯತೆ ನೀಡಿ**
ಮಕ್ಕಳ ಪಾಠಗಳು, ಗೃಹಪಾಠಗಳು, ಮತ್ತು ಪರೀಕ್ಷಾ ತಯಾರಿ ಹಂತವನ್ನು ಪರಿಶೀಲಿಸಿ. ಶಾಲಾ ಶಿಕ್ಷಕರ ಜೊತೆ ನಿಯಮಿತವಾಗಿ ಸಂಪರ್ಕಿಸಿ ಮಕ್ಕಳ ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಅಭಿವೃದ್ಧಿ ಕುರಿತು ಮಾಹಿತಿ ಪಡೆಯಿರಿ.

**6. ಶಿಸ್ತು ಮತ್ತು ಸ್ವಾತಂತ್ರ್ಯಕ್ಕೆ ಸಮತೋಲನ ಕಾಯ್ದುಕೊಳ್ಳಿ**
ಅಗತ್ಯವಿದ್ದಾಗ ಮಕ್ಕಳಿಗೆ ಸಹಾಯ ಮಾಡಿರಿ, ಸ್ವತಂತ್ರವಾಗಿ ಅಭ್ಯಾಸ ಮಾಡುವ ಅವಕಾಶ ನೀಡಿ. ನಿರಂತರವಾಗಿ ಒತ್ತಡ ಹಾಕುವುದರಿಂದ ಮಕ್ಕಳು ಉತ್ತಮ ಶ್ರೇಣಿಯಿಂದ ವಂಚಿತಗೊಳ್ಳಬಹುದು, ಹಾಗಾಗಿ ಸಮತೋಲನವನ್ನು ಕಾಪಾಡಿ.

**7. ಆರೋಗ್ಯದತ್ತ ಗಮನ ಹರಿಸಿ**
ನಿತ್ಯ ಸರಿಯಾದ ಆಹಾರ, ನಿದ್ರೆ, ಮತ್ತು ವಿಶ್ರಾಂತಿ ಅವರ ಕಲಿಕೆ ಪ್ರಭಾವಕ್ಕೆ ಬಹಳ ಮುಖ್ಯ. ಒತ್ತಡ ನಿವಾರಣೆಗೆ ಮಕ್ಕಳಿಗೆ ಹಗುರವಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಡಿ.

**8. ತೀರ್ಮಾನಗಳಲ್ಲಿ ಸಹಾಯ ಮಾಡಿ**
ಮುಂದಿನ ವಿದ್ಯಾಭ್ಯಾಸದ ಗುರಿಗಳನ್ನು ಪರಿಚಯಿಸಿ. ಬೋರ್ಡ್ ಪರೀಕ್ಷೆಯ ನಂತರ ಯಾವ ಕೋರ್ಸ್ ಅಥವಾ ಸ್ಟ್ರೀಮ್ ಆಯ್ಕೆ ಮಾಡಬೇಕು ಎಂಬ ವಿಷಯದಲ್ಲಿ ಚರ್ಚಿಸಿ. ಮಕ್ಕಳ ಸ್ವಭಾವ ಮತ್ತು ಆಸಕ್ತಿಯ ಆಧಾರದ ಮೇಲೆ ಮಾರ್ಗದರ್ಶನ ನೀಡಿರಿ.

**9. ಪ್ರೇರಣಾದಾಯಕ ಉದಾಹರಣೆ ನೀಡಿರಿ**
ಯಶಸ್ವಿಯಾದ ವ್ಯಕ್ತಿಗಳ ಕಥೆಗಳು, ನಿಮ್ಮದೇ ಕೆಲಸದ ಅನುಭವ ಅಥವಾ ಜೀವನ ಪಾಠಗಳನ್ನು ಹಂಚಿಕೊಂಡು ಮಕ್ಕಳನ್ನು ಪ್ರೇರೇಪಿಸಿ. ಜೀವನದಲ್ಲಿ ಶ್ರಮದ ಮಹತ್ವವನ್ನು ಮನವರಿಕೆ ಮಾಡಿಸಿ.

**10. ಅಹಿತಕರ ಒತ್ತಡ ಹೊರಿಸದಿರಿ**
ತೇರ್ಗಡೆಯ ತೀರ್ಮಾನವನ್ನು ಕಠಿಣವಾಗಿ ನಿರ್ಧರಿಸದೆ, ಅವರ ಶ್ರಮದ ಮೇಲೆ ಗಮನಹರಿಸಿ. “ನೀವು ಪ್ರಯತ್ನಿಸಿ ಯಶಸ್ವಿಯಾಗುತ್ತೀರಿ” ಎಂಬ ಆತ್ಮಸ್ಥೈರ್ಯ ತುಂಬುವ ಮಾತುಗಳು ಹೆಚ್ಚು ಪ್ರೇರಣೆ ನೀಡುತ್ತವೆ.

www.hampitimes.com/epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

ಸುದ್ದಿ, ಇವೆಂಟ್ಸ್ ಕವರೇಜ್, ಜಾಹೀರಾತಿಗಾಗಿ ಸಂಪರ್ಕಿಸಿ: ಮೊ:9448633038, ಇಮೇಲ್: hampitimes@gmail.com

ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರವು ಅತ್ಯಂತ ಮಹತ್ವದಾಗಿದೆ. ಪೋಷಕರು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರಿಗೆ ಪ್ರೋತ್ಸಾಹ ಮತ್ತು ಪ್ರೀತಿ ತುಂಬಿದ ಪರಿಪೂರ್ಣ ಸಹಾಯವನ್ನು ನೀಡಿದರೆ, ಮಕ್ಕಳು ನಿಜಕ್ಕೂ ಉತ್ತಮವಾಗಿ ಹೊರಹೊಮ್ಮುತ್ತಾರೆ